॥ ಶ್ರೀ ॥

# ಭಕ್ತಿ ಸುಧಾಸಾರಂ



ಗ್ರಂಥಕರ್ತ

ಹೆಡ್ಮಾಸ್ಟರ್,

ಆರ್. ಎ. ವಿ. ಸ್ಕೂಲ್,

(ಕುದೇರು, ಚಾಮರಾಜನಗರ ತಾಲ್ಲೂಕು)

ಪ್ರಥಮ ಮುದ್ರಣಂ

ಮೈಸೂರು:
...ಷ್ಣಾ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.
1922

ಬೆಲೆ 0-3-6 ಆಣೆ.

ಕನ್ನಡ ಸಾಹಿತ್ಯ ಪರಿಷತ್ತು ಸರಸ್ವತಿ ಭಂಡಾರ, ಬೆಂಗಳೂರು.
Q,2:417
N22
2485
ಸರಸ್ವತೀ ಭಂಡಾರ
ಪರಿಷತ್ತು
Digitized by ROJA MUTHIAH RESEARCH LIBRARY

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ,
ಬೆಂಗಳೂರು-೧೮.

Digitized by ROJA MUTHIAH RESEARCH LIBRARY

A 2485
Q.2:417 N22

Rev 14

# ಪ್ರಸ್ತಾವನೆ.

ಈ ಕಲಿಯುಗದಲ್ಲಿ "ಭಕ್ತಿರ್ವಿನಾ ಮುಕ್ತಿರ್ನಸಿದ್ಧ್ಯತಿ." ಎಂಬ ವಚನ ರೀತ್ಯಾ, ಸರ್ವರಿಗಂ ಐಹಿಕಾಮುಷ್ಮಿಕಫಲಂಗಳ ಪ್ರಾಪ್ತಿಗೆ ಸುಲಭಸಾಧ್ಯವಾದ ಮಾರ್ಗವು ಭಕ್ತಿಯೊಂದೇ ವಿನಾ ಮತ್ತಾವುದಿರುವುದು? ಇದನ್ನರಿತು ಭಗವದ್ಭಕ್ತರಾದ ಅನೇಕ ಮಹಾತ್ಮರು ತಮ್ಮಲ್ಲಿರುವ ಭಕ್ತಿಯನ್ನೇ ಭಗವಂತನಾದ ಪರಮೇಶ್ವರನಿಗೆ ಮೊದಲರ್ಪಿಸಿ, ತನ್ಮೂಲಕವಾಗಿ ಚತುರ್ವರ್ಗಂಗಳಲ್ಲಿ ಕೊನೆಯದಾದ ಮುಕ್ತಿಪಥವಂ ಪಡೆಯಲೋಸುಗ, ಪರಮಕಾರುಣ್ಯಮೂರ್ತಿಯಾದ ಪರಮೇಶ್ವರನಂ ಭಕ್ತಿಪುರಸ್ಸರವಾಗಿ ಸ್ತುತಿಗೆಯ್ದು ಧನ್ಯರಾಗಿರುತ್ತಾರಷ್ಟೆ. ಆದರೆ ಹೆಳವನು ಫಲಭರಿತವಾದ ವೃಕ್ಷವಂ ಬಯಸಿದಂತೆ ನಾನು ಈಗ ಪ್ರಯತ್ನಿಸಿರುವ ಕಾರ್ಯವು ಮಹತ್ತರವಾಗಿವೆ ಎಂದು ಹೇಳಬೇಕಲ್ಲವೆ? ಒಂದುದಿನ ಅಲ್ಪಜ್ಞನಾದ ನಾನು ಅಂತರಂಗವ್ಯಾಕುಲಚಿತ್ತನಾಗಿದ್ದು, ತದನಂತರ ಹಾಗೆಯೇ ತಚ್ಛಂಕರನಿಂ ಪ್ರೇರಿತನಾಗಿ, ಈ ಗ್ರಂಥದ ಮೊದಲನೆಯ ಪದ್ಯವನ್ನು ಮಾತ್ರ ವಾರ್ಧಕಷಟ್ಪದಿರೂಪದಲ್ಲಿ ಬರೆದೆನು. ಮತ್ತೆ ಕೆಲವು ದಿನಗಳೆಂದರೆ 15-20 ದಿವಸಗಳಮೇಲೆ 4-5 ಪದ್ಯಗಳು ವಿರಚಿಸಲ್ಪಟ್ಟು, ಜೀವನೋಪಾಯಕಾರ್ಯಗಳ ದೆಸೆಯಿಂದ ಅವಕಾಶವಿಲ್ಲದೆಹೋಯಿತು. ಆಹಾ! ಈ ಸಂಸಾರ ಮಹಿಮೆಯೆಂಥದಾಗಿರಬಹುದು?

ಏತನ್ಮಧ್ಯೆ ಮತ್ತೊಂದು ದಿವಸ, ವೇದಾಗಮಾದಿಗಳಿಗೆ ಅಗೋಚರನಾದ ಪರಮಾತ್ಮನಂ ಸ್ತುತಿಸುವುದಕ್ಕೆ ಹಿಂದಣ ಮಹಾತ್ಮರಹಾಗೆ ಮಂದಮತಿಯಾದ ನನಗೆ ಆವ ಸಾಧನಶಕ್ತಿಯುಂಟು? ಎಂಬ ವಿಶಂಕೆ ತಲೆದೋರಿತು. ಆದಾಗ್ಯೂ ಬಿಡದೆ ತಚ್ಚಿಂತೆಯಲ್ಲಿಯೇ ಮಗ್ನನಾದೆನು. ಸರ್ವಾಂತರ್ಯಾಮಿಯಾದ ಆ ಪರಮ ಗುರುಶಂಕರನೇ ಎನ್ನ ಹೃದಯದಲ್ಲಿ ಪದೇ ಪದೇ ಪ್ರೇರಿಸುತ್ತ ಬಂದುದರಿಂದ, ಸಮಯವೊದಗಿದಾಗ ಮಾತ್ರ ಆದಷ್ಟು ಪದ್ಯಗಳಿಂ ಆ ಪರಮಾತ್ಮನಂ ಸ್ತುತಿಸಲಿಕ್ಕೆ ಪ್ರಾರಂಭಿಸಿ, ಮದಿಷ್ಟಸಂಕಲ್ಪವಂ ಶೀಘ್ರವಾಗಿಯೇ ನೆರವೇರಿಸಿಕೊಂಡೆನು.
...ತಚ್ಛಂಕರ ಕೃಪಾಕಟಾಕ್ಷಲಬ್ಧ ಸದ್ಭಕ್ತಿಬಲದಿಂದೀಗ್ರಂಥವು ಪೂರ್ತಿಯಾ...
ಆದುದರಿಂ ಇದಕ್ಕೆ "ಭಕ್ತಿಸುಧಾಸಾರ" ವೆಂಬ ಪೆಸರಿಡಲ್ಪಟ್ಟಿತು.

ಈ ಗ್ರಂಥದಲ್ಲಿ ನೀತಿ, ಮತ, ಲೋಕವ್ಯವಹಾರ ಮತ್ತು ತತ್ವವಿಚಾರ-
...ದಲಾದುವು ಅಡಗಿರುವುದರಿಂದ, ಇದು ಸರ್ವರಿಗೂ ಪಠನಯೋಗ್ಯವಾ

Digitized by ROJA MUTHIAH RESEARCH LIBRARY

ಗಿರುತ್ತದೆಂದು ಭಾವಿಸಿ, ಇದನ್ನು ಲೋಕೋಪಕಾರಾರ್ಥವಾಗಿ ರಚಿಸಿ, ಮಹನೀಯರ ಸಮಕ್ಷದಲ್ಲಿ ಇರಿಸಿರುವೆನು.

ಈ ಗ್ರಂಥವಂ ಅಚ್ಚುಹಾಕಿಸಿ ಪ್ರಚಾರಪಡಿಸುವ ವಿಚಾರದಲ್ಲಿ ಉದಾರ ಮನಸ್ಸಿನಿಂದ ಚಂದಾದ್ರವ್ಯ ಸಹಾಯಮಾಡಿದ ಚಾಮರಾಜನಗರ, ಕುದೇರು, ಮಂಗಲ ಮತ್ತು ರಾಘವಾಪುರ-ಈ ಸ್ಥಳಗಳಲ್ಲಿನ ಮಹನೀಯರುಗಳ ಉಪಕಾರವು ಚಿರಸ್ಮರಣೀಯವಾಗಿರುವುದು. ಆದುದರಿಂದ ಈ ಮಹನೀಯರುಗಳು ಮಾಡಿರುವ ಮಹದುಪಕಾರಕ್ಕೆ ನಾನು ನಿರಂತರವೂ ಬಹು ಕೃತಜ್ಞತೆಯುಳ್ಳವನಾಗಿರುತ್ತೇನೆ.

ದುಂದುಭಿನಾಮಸಂವತ್ಸರ.
ಚೈತ್ರ ಶುದ್ಧ ನವಮಿ.
ತಾ|| 6—4—1922

ಸರ್ವಜನ ಪ್ರೇಮಪಾತ್ರ,
ಸಿ. ನಾಗೈಯ್ಯ.

|| ಶ್ರೀ ||

ಶ್ರೀ ಶಂಕರ ಗುರುಭ್ಯೋನಮಃ.

# ಭಕ್ತಿಸುಧಾಸಾರಂ

## ವಾರ್ಧಕ ಷಟ್ಪದಿ.

ಶ್ರೀಪುತ್ರನಿಂದೆ ನಿಜತಪಕೆಡರ್ಸಲಂದು |
ಕೋಪದಿಂ ಬಿಡಲವನ ಸುರುಹಿದನಲಾಂಬಕದ |
ತಾಪವಂ ಸೈಸಲಾರದೆ ದೇವಸಿಂಧುವಂ ಜಡೆಮುಡಿಯೊಳಾಂತು ಬಳಿಕ ||
ಈ ಪೃಥಿವಿಗಾನಂದಗುಡುವಿಂದುವಂ ಬಿಡದೆ |
ನೈಪಥ್ಯಮಂ ಮಾಡಿಕೊಂಡೆಸೆವ ಭಕ್ತಭವ |
ತಾಪವಂ ಪರಿಹರಿಪ ಗಿರಿಜೇಶ ಶಂಕರನೆ! ಪೊರೆ ಭುವನಸಂಕುಲವನು ||೧||

ನಿರುತಂ ಚಲತ್ಕರ್ಣತಾಲರುಹಮಾರುತಾಂ |
ಕುರಕೆಳಸಿ ಪೆಡೆಯಿಂದೆ ನಸುಬಾಯ್ದೆರೆಯುತಿರ್ಪ |
ಹರಿಯನತುಲಾಭರಣಮಂ ಮಾಡಿಕೊಂಡೆಸೆವ ಗಂಡಮದನಿರ್ಝರಿಣಿಯ ||
ಪರಿಲೋಲ ಕಲ್ಲೋಲ ವಿಕ್ರೀಡೆಯೊಳ್ಚರಿಪ |
ಪರಮೆಗಳ ರವದೆ ದಿಗ್ವಲಯಮಂ ಪಸರಿಸುವ |
ಕರಿವದನ! ಮತ್ಕೃತಿಗೆ ನಿರ್ವಿಘ್ನತೆಯನಿತ್ತು ಪೊರೆ ಭುವನಸಂಕುಲವನು ||೨||

ಒಂದು ಕರದೊಳ್ತ್ರಿಶೂಲಾಯುಧವನಿರದೆ ಮಗು |
ಳೊಂದು ಕರದೊಳ್ಮಹಾಧ್ವನಿಗುಡುವ ಡಮರುಕವ |
ನೊಂದು ಕರದೊಳ್ಖಡ್ಗವಂ ಮತ್ತಮೊಂದು ಕರದೊಳಗಜೆಯನಪ್ಪಿಕೊಂಡು ||
...ಂದು ಕರದೊಳ್ಭಕ್ತರಿಗಭಯ ವರವನೀವ |
...ಂದದಿಂ ಪರಿಶೋಭಿಸುವ ಚಂದ್ರಧರ ವಿಶತ |
...ದರ್ಪದರ್ಪಹರ ತ್ರಿಪುರಹರ ಶಂಕರನೆ! ಪೊರೆ ಭುವನಸಂಕುಲವನು ||೩||

Digitized by ROJA MUTHIAH RESEARCH LIBRARY

ಒಂದರ್ಥಗುಡುವಕ್ಷರಾವಳಿಯೆ ಪದಮೆನಿಕು |
ಮೆಂದದಂ ಬೀಜವೃಕ್ಷನ್ಯಾಯದಂತೆ ಮನ |
ದಂದಾಕವೀಂದ್ರರನುಮತಿವಿಡಿದು ರಚಿತಸುಲಲಿತಪದಪ್ರಕರದಿಂದ ||
ಬಂಧುರವೆನಿಪ್ಪ ಚಾರಿತ್ರಮಿದು ಸಕಲಜನ |
ರಿಂದೆ ಸುಶ್ರಾವ್ಯಮಪ್ಪಂತೆನ್ನ ಹೃದಯಾರ |
ವಿಂದದೊಳ್ನೆಲಸಿ ಕುಡು ಸುಮತಿಯಂ ಶಂಕರನೆ ! ಪೊರೆಭುವನಸಂಕುಲವನು ||೪||

ಪದಜಾಲವಿಪಿನದೊಳ್ಪುಡಿಕಿದೊಡೆ ಸಫಲಮೇಂ ? |
ಮದನಾರಿ ! ಬರಿದೆ ಬಹುಚಿತ್ತಭ್ರಮಣಮಪ್ಪು |
ದದರಿಂದೆ ತವಮಹಿಮೆಯಂ ಬಣ್ಣಿಪುದಕಜ್ಞನೆನಿಪ ನಾಂ ಸರ್ವಜ್ಞನೇಂ ? ||
ಪದೆದು ನೀಂ ಪ್ರೇರಿಸುವವೋಲ್ವೇಳ್ವೆನೆಡೆವಿಡದೆ |
ಮೃದುಪದಾರ್ಥಸ್ಫೂರ್ತಿಯಂ ಕರುಣಿಸೆನ್ನೆರ್ದೆಯ |
ಪದುಮದೊಳ್ನೆಲಸಿರ್ದು ನುಡಿಸುವುದು ಶಂಕರನೆ! ಪೊರೆ ಭುವನಸಂಕುಲವನು ||೫||

ಕಡೆದೊಡಂ ಸುರರಿಂದೆ ತಡೆದೊಡಂ ಕಪಿಗಳಿಂ |
ಕುಡಿದೊಡಂ ಪಿಂದೆ ಕಿತ್ತಡಿಯಿಂದೆ ಕಂಗೆಡದ |
ನೊಡಲಲ್ಲಿ ಸಂಜನಿಸಿದವಳಾಕೆಯಾತ್ಮಸಂಭವನ ನೀಕ್ಷಿಸುತಾಗಳೆ ||
ಕಡುಕಿನಿಸಿನಿಂ ಮಡಿಪಿ ಪೊಡವಿಯೊಳ್ಬಲ್ಸಿಸ |
ರ್ಚಡೆದಿರ್ಪ ಸಬ್ಬಾಣಿಯೆರ್ದೆಯೊಡೆಯ ! ನಿರುತ ನಿ |
ನ್ನಡಿದಾವರೆಗೆ ಪೊಡಮಡುವೆನೆಯ್ದೆ ಶಂಕರನೆ ! ಪೊರೆ ಭುವನಸಂಕುಲವನು ||೬||

ಸುರುಚಿರಸುವರ್ಣವಿರಚಿತಲಲಿತಮಂಡಪದೊ |
ಳಿರಿಸಿ ತವಮೂರ್ತಿಯಂ ಗಂಗಾನದೀಮುಖ್ಯ |
ವರತೀರ್ಥದಿಂದ ಮಭಿಷೇಕವಂ ರಚಿಸಿ ಗಂಧಾಕ್ಷತಕುಸುಮಗಳಿಂದ ||
ನಿರುತಮರ್ಚಿಸಿ ಪರಮಶಾಲ್ಯನ್ನಮುಖ್ಯಪರಿ |
ಪರಿಯ ನೈವೇದ್ಯವಂ ನಿನಗರ್ಪಣಂಗೆಯ್ದು |
ನೆರೆ ಭಜಿಸುವೆಂ ಸದ್ಗತಿಯನಿತ್ತು ಶಂಕರನೆ ! ಪೊರೆ ಭುವನಸಂಕುಲವನು ||೭||



ಮಧುರಮಾದಧಿ ಮಧುರಮಾ ಮಧುರಸಂ ಮತ್ತ |
ಮದರಿಂದ ಮತಿಮಧುರಮಾ ಖಂಡಶರ್ಕರಂ |
ಮಧುರ ಮೆನಿಸಿರ್ಪುದೈ ಮಧುವು ಮರ್ತ್ಯರ್ಗ್ಗೆ ಮೇಣಿಂದ್ರಾದಿಸುರಜಾಲಕೆ ||
ಸುಧೆಯರಸವತಿಮಧುರ ಮೆಂದೆನಿಸಿಕೊಂಡಿರ್ಪು |
ದದರಿಂದೆ ತವ ನಾಮಮೆನ್ನ ನಾಲಗೆಗೆ ಬಹು |
ಮಧುರಮೆನಿಸಿರ್ಪುದೈ ಸಂತತಂ ಶಂಕರನೆ! ಪೊರೆ ಭುವನಸಂಕುಲವನು ||೮||

ಇಂದುಧರ ಸಿಂಧುರಾಸುರಚರ್ಮವಸನಧರ |
ಸಿಂಧುಧರ ಪರಮಕರುಣಾಸಿಂಧು ಹರಿಣಧರ |
ಕಂದರ್ಪಮದಹರ ಪಿನಾಕಧರ ಮಂದಹಾಸೋಜ್ಜ್ವಲಮುಖಾರವಿಂದ ||
ಅಂಧಕಾಸುರಮಥನ ದಂದಶೂಕಾಭರಣ |
ನಂದಿವಾಹನ ದಂಡಧರಚಕಿತಧರಣಿಸುರ |
ನಂದನೋದ್ಧರಣ ನಿತ್ಯಾನಂದ ಶಂಕರನೆ! ಪೊರೆ ಭುವನಸಂಕುಲವನು ||೯||

ಬಾಲಮಾರ್ಕಂಡೇಯಪರಿಪಾಲ ಕಾಮದಾಹ |
ಶೂಲವಿದಳಿತಶೂಲಧರ ಕಾಲಕೂಟಧೃತ |
ನೀಲಗಳ ಸಾಮಗೀತಾನಂದಪರಿಲೋಲ ಸುಜನಪರಿಪಾಲಶೀಲ ||
ವ್ಯಾಳಭೂಷಣ ಫಾಲಲೋಚನಾಗಮಶೀಲ |
ಕೈಲಾಸವಾಸ ಲೀಲಾವಿನೋದಿತರುಂಡ |
ಮಾಲಾಪ್ರಕಾಶ ನಿಗಮಾತೀತ ಶಂಕರನೆ! ಪೊರೆ ಭುವನಸಂಕುಲವನು ||೧೦||

ನಿನ್ನಂಘ್ರಿಪೂಜೆಯಂ ಕರದಿಂದೆ ಮಾಳ್ಪುದಂ |
ನಿನ್ನಂ ಸ್ಮರಣೆಗೈವುದಂ ನನ್ನಮನದಲ್ಲಿ |
ನಿನ್ನತುಲನಾಮವಂ ರಸನೆಯೊಳ್ನುಡಿವುದಂ ಸಂತತಂ ಕರ್ಣದಿಂದ ||
ನಿನ್ನ ಕತೆಯಂ ಕೇಳ್ವುದಂ ಧರೆಗಿಳಿಯದಂತೆ |
ನಿನ್ನ ಶರಣರ ಸಂಗದಲ್ಲಿರಿಸಿ ಕಡೆಗೆ ನೀ |
ನುನ್ನತಪದವಿಯಿತ್ತು ದಯೆಯಿಂದೆ ಶಂಕರನೆ! ಪೊರೆ ಭುವನಸಂಕುಲವನು||೧೧||

Digitized by ROJA MUTHIAH RESEARCH LIBRARY

ಅನುದಿನಂ ಮನುಮುನಿಪಮನುಜಾದಿಸಂಸೇವ್ಯ |
ವಿನಮಿತಾಮರವಿಸರಮಕುಟಮಣಿಘನತೇಜ |
ವಿನತಾರ್ಥಿವೃಜಿನರಿಪುಕುಲಗಹನದಹನ ನುತಜನವನಜಗಗನರತುನ ||
ಕನಕಶಿಖರೀನಿಜನಿಳಯ ಧನದನಿಜಮಿತ್ರ |
ಜನಿಮರಣಭಯಶೋಕಧರಣಿಭೃದ್ಘನಭಿದುರ |
ತನುಕರಣಸಾಕ್ಷಿಕ ಪರಂಜ್ಯೋತಿ ಶಂಕರನೆ ! ಪೊರೆ ಭುವನಸಂಕುಲವನು ||೧೨||

ಶಿವ ಮಹಾದೇವ ಗುಹಪಿತ ಶರ್ವ ಪಾರ್ವತೀ |
ಧವ ನಂದಿವಾಹ ದೇವೇಶ ಜಗದೀಶ ವಾ |
ಸವನತಪದಾಂಭೋಜ ನಗಚಾಪ ನಿತ್ಯ ನಿರ್ಮಲ ಶಂಭು ಮೃತ್ಯುಂಜಯ ||
ಪವಮಾನಸಖನೇತ್ರ ವಿಜಯಸಂಸ್ತುತ್ಯ ವೈ |
ಶ್ರವಣಸಖ ಪಂಚಮುಖ ಪರಮೇಶ ಸಿತಿಕಂಠ |
ಭವ ಭರ್ಗ ಭಸಿತಾಂಗ ವಿಶ್ವಾತ್ಮ ಶಂಕರನೆ! ಪೊರೆ ಭುವನಸಂಕುಲವನು ||೧೩||

ಸಪ್ತರಸನಂಗಳಂ ಪಸರಿಪನ ನಯನದಿಂ |
ಸಪ್ತಾಶ್ವಗಳನೆಡೆವಿಡದೆ ಗಗನಮಾರ್ಗದೊಳ್ |
ಗುಪ್ತದಿಂ ನಡೆಸುವನ ಕಣ್ಣಿಂದೆ ಸುರವರ್ತ್ಮದಲ್ಲಿ ಸಂಚರಿಪ ಮುಖ್ಯ ||
ಸಪ್ತವಿಂಶತಿತಾರಕಾರಮಣನಕ್ಷಿಯಿಂ |
ದೀಪ್ತನೆನಿಸಿರ್ಪ ಮುಕ್ಕಣ್ಣ ಸಪ್ತವ್ಯಸನ |
ಸಪ್ತಾವರಣದೂರ ಕೃಪೆಗೈದು ಶಂಕರನೆ! ಪೊರೆ ಭುವನಸಂಕುಲವನು ||೧೪||

ಸೋಮ ಮೃಡ ಕಾಲಜಿತ ಪಶುಪತೀಶಾನ ನಿ |
ಷ್ಕಾಮ ಸದ್ಯೋಜಾತ ಸುರುಚಿರಸುಗುಣಭರಿತ |
ವಾಮದೇವಾಘೋರ ಭವಮರಣರಹಿತ ಸುಜನೈಕಬಾಂಧವ ಗುಹಪಿತ ||
ಭೀಮ ತತ್ಪುರುಷ ಭಾಗೀರಥೀಧರ ನಿರಘ |
ಕಾಮಮೃತ್ಯುಂಜಯ ಸನಾತನ ವಿರೂಪಾಕ್ಷ |
ಕಾಮಿತಾರ್ಥವನಿತ್ತು ಸಂತತಂ ಶಂಕರನೆ! ಪೊರೆ ಭುವನಸಂಕುಲವನು ||೧೫||



ಮಂಗಳಾತ್ಮಕ ಗೋತುರಂಗ ನಿರುಪಮಪಾಂಡು |
ರಾಂಗ ರಿಪುದೈತೇಯಕುಲಭಂಗ ಕರಧೃತಕು |
ರಂಗ ಗಂಗಾತರಂಗಾದ್ರ್ಯೋತ್ತಮಾಂಗ ದುರಿತೌಘಮಾತಂಗಸಿಂಗ ||
ಅಂಗಸಂಭವಮದವಿಭಂಗ ನಿಷ್ಕಲುಷಾಂತ |
ರಂಗ ಮೋಹಾಂಧಕಾರಾವಳಿಪತಂಗ ಸ |
ತ್ಸಂಗ ನಿರತಿಶಯಕರುಣಾಪಾಂಗ ಶಂಕರನೆ ! ಪೊರೆ ಭುವನಸಂಕುಲವನು ||೧೬||

ಧಿಟ್ಟರಾವಣನಂದು ಲೆಕ್ಕಿಸದೆ ತಾಂ ಬೆಳ್ಳಿ |
ಬೆಟ್ಟವಂ ನೆಗಹಲೊಡನರಿಯದಂತೊತ್ತಿದಯ್ |
ನೆಟ್ಟನಂಧಕದೈತ್ಯನೆರ್ದೆಯಲ್ಲಿ ಭರತನಿಯಮದ ತೆರದೆ ನರ್ತಿಸಿದಯ್ ||
ಬೊಟ್ಟಿನಿಂ ಬರೆದ ಚಕ್ರವ ಜಲಂಧರಗಿತ್ತು |
ಗುಟ್ಟಿನಿಂದವನ ಶಿರವರಿದೆ ಮುಪ್ಪುರಗಳಂ |
ಸಿಟ್ಟಿಸುತ್ತುರುಹಿದೈ ಘನಮಹಿಮ ಶಂಕರನೆ! ಪೊರೆ ಭುವನಸಂಕುಲವನು ||೧೭||

ಹರಿವರ್ಣಹರಿಗಮನಹರಿಮಿತ್ರಸಂಹರಣ |
ಹರಿನಯನ ಹರ್ಯಶನನಿಜಶರೀರಾಭರಣ |
ಹರಿವಕ್ಷನಿಶಿತತ್ರಿಶೂಲವಿದಳನ ಹರೀಂದ್ರಾದಿಸುರನಮಿತಚರಣ ||
ಹರಿವಸನ ಹರಿತನುಜಶಿರಪಾಣಿ ಹರಿರೂಪ |
ಹರಣಾಂಕಸುರನಿಮ್ನಗಾಧಾರವರಶೀರ್ಷ |
ಹರಿಗಮನಮಿತ್ರ ವರಹರಿಗಾತ್ರ ಶಂಕರನೆ! ಪೊರೆ ಭುವನಸಂಕುಲವನು ||೧೮||

ಧರಣಿಭೃದ್ವರಕುಮಾರೀಮುಖಾಂಬುಜಮಿತ್ರ |
ಸರಸಿರುಹಭವಪುತ್ರಮುಖಮುನಿಪನುತಿಪಾತ್ರ |
ಖರಕಿರಣಶಶಿವಹ್ನಿನೇತ್ರ ಸಕಲೈಶ್ವರ್ಯಕರಭಸಿತಧವಳಗಾತ್ರ ||
ಸುರಭಿಸದ್ಭಕ್ತವ್ರತತಿ ಚಾರುವನಚೈತ್ರ |
ನಿರತಿಶಯಸಂಸ್ತುತ್ಯಸುಗುಣಮಣಿಗಣಸೂತ್ರ |
ಪರಮದುಷ್ಕೃತಲತಾಶಿತದಾತ್ರ ಶಂಕರನೆ ! ಪೊರೆ ಭುವನಸಂಕುಲವನು ||೧೯||

Digitized by ROJA MUTHIAH RESEARCH LIBRARY

ಬೆಂದು ತವೆಬೆಂಡಾಗಿ ಮುಂದೆ ನಿಂದಿರ್ದ ಖಲ |
ಕಂದರ್ಪನಂ ಸುಟ್ಟುಭಸ್ಮೀಕೃತಂಗೆಯ್ದು |
ಕುಂದದಂತಂದಿಳಾರಥವಂ ರಸಾತಲಕೆಬೆರೆವಂತೆ ನೀಂ ಮೆಟ್ಟಿದೆ ||
ಛಂದದಿಂದಂ ಕಾಳಿದಾಸಾದಿಕವಿವರ್ಯ |
ಬೃಂದದಿಂದೆಯ್ದೆ ಬಣ್ಣಿಸಿಕೊಳ್ವ ಚಾರುತರ |
ಮಂದಾರಗಿರಿವಾಸ ನಿರ್ಲೇಪ ಶಂಕರನೆ! ಪೊರೆ ಭುವನಸಂಕುಲವನು ||೨೦||

ಹರಿವಿಧಿಸುರೇಂದ್ರಾದಿಸುರನುತಪದಾಂಭೋಜ |
ಶರಣಜನಸಂಚಯಾಭೀಷ್ಟದಾಮರಭೂಜ |
ಗಿರಿವರೇಣ್ಯಾತ್ಮಜಾಸೌಭಾಗ್ಯವಾರಿನಿಧಿವರ್ಧಿಷ್ಣುಪೂರ್ಣರಾಜ ||
ಶರಸಂಭವಾರಾತಿತೇಜೋತಿಶಯತೇಜ |
ನಿರತಿಶಯನಿಜತೇಜದಗ್ಧಘನಭವಬೀಜ |
ನಿರುಪಮ ನಿರಾಲಂಬ ಘನಮಹಿಮ ಶಂಕರನೆ! ಪೊರೆ ಭುವನಸಂಕುಲವನು||೨೧||

ಜಯಜಯತು ಸಂತತಂ ನಮದಮರನಿಜಪಕ್ಷ |
ಜಯಜಯತು ದಕ್ಷಮಖನಿರ್ದಳನಬಹುದಕ್ಷ |
ಜಯಜಯತು ದುರಿತೌಘಮತ್ತಮಾತಂಗಕುಲಹರ್ಯಕ್ಷ ಜಲರುಹಾಕ್ಷ ||
ಜಯಜಯತು ಶರಣಾಗತಾರ್ತಿಜನಸಂರಕ್ಷ |
ಜಯಜಯತು ಕುಟಿಲದೈತೇಯಪ್ರಚಯಶಿಕ್ಷ |
ಜಯಜಯತು ಸರ್ವಜ್ಞನಿಟಿಲಾಕ್ಷ ಶಂಕರನೆ! ಪೊರೆಭುವನಸಂಕುಲವನು||೨೨||

ದುರಿತಗುಣಭರಿತ ನಾಂ ನಿರಘಗುಣಭರಿತ ನೀಂ |
ನಿರುತ ಕಡುಬಡವ ನಾಂ ನಾಡೆ ಸಿರಿವಂತ ನೀಂ |
ನೆರೆ ಪಂಚವಿಷಯಾಭಿರತಿ ನಾನು ನೋಡೆ ವಿಷಯಾಭಿರತಿರಹಿತ ನೀನು ||
ಒರೆವುದೇನಲ್ಪಜ್ಞನಾನು ಸರ್ವಜ್ಞ ನೀಂ |
ಸರಿಸಮಾನರೊಳರೇ? ನಿನಗೆಕೈವಲ್ಯಪತಿ |
ಪರಮಕರುಣಾಮೂರ್ತಿ ಪರಮಾತ್ಮ ಶಂಕರನೆ! ಪೊರೆಭುವನಸಂಕುಲವನು||೨೩||



ಕಂತುಹರ! ನೀಂ ಮಾಡಿದುಪಕಾರಕೆಣೆಯುಂಟೆ? |
ಪಂತದಿಂದಸುರಸುರರೊಂದೊಂದು ಕಡೆಯಲ್ಲಿ |
ನಿಂತು ಮಥಿಸಲ್ಕೆ ಶರನಿಧಿಯೊಳ್ಜನಿಸಿ ಜಗವನುರೆ ದಹಿಸುತಾರ್ಭಟದಿಂ ||
ಮುಂತೈದುತಿರ್ಪ ವಿಷಕಂಜಿ ಮರೆವೊಗಲಂದು |
ಸಂತವಿಸುತವರರ್ಥಿಯಂತದಂ ಕಂಧರದೊ |
ಳಾಂತ ಸಿತಿಕಂಠವರನಾಮಾಂಕ ಶಂಕರನೆ! ಪೊರೆ ಭುವನಸಂಕುಲವನು ||೨೪||

ನಿಂದಿಸದಿರನ್ಯರಂ ಮನಕೆ ಬಂದಂತೆ ನೀಂ |
ಕುಂದುವಡೆಯದಿಹದೋಳ್ಪುಣ್ಯಕರ್ಮವನೆಸಗು |
ಕಂದ! ತಾನಾರೆಂದು ಸುವಿಚಾರಗೆಯ್ಯುತ್ತೆ ಸುಜನರೊಡನಾಡಿ ಸುಖಿಸು ||
ಸಂಧಿಸಿದ ಕಲಹದೊಳ್ಮನಶಾಂತಿಯಂ ತಳೆವು |
ದೆಂದೊರೆದ ವಚನವಂ ನಂಬಿರುವೆನಗೆ ಪದುಳ |
ದಿಂದೆ ನಿಶ್ಶ್ರೇಯಸದ ಪಥದೋರಿ ಶಂಕರನೆ! ಪೊರೆ ಭುವನಸಂಕುಲವನು||೨೫||

ಸೃಷ್ಟಿಸುಸ್ಥಿತಿಲಯಂ ನಿನ್ನಿಂದಹುದದರಿಂ |
ದುಷ್ಟಜನಸಂಸರ್ಗವಂ ಬಿಡಿಸಿ ಸತತಮೆ |
ನ್ನಿಷ್ಟವಿದೆನುತ್ತರಿದು ಮುಂಬರಿವಪೂಳ್ಶಿಷ್ಟಸಂಗದೊಳಿರಿಸು ಮನವಂ ||
ಅಷ್ಟೈಶ್ವರಿಗೆ ನೀನೆರಸನೆನಿಸಿರ್ಪುದರಿಂದೆ |
ಕಷ್ಟಂಗಳಂ ಪರಿಹರಿಸಿ ನೀನೆನಗಖಿಲಾ |
ಭೀಷ್ಟವಂ ಬಿಡದಿತ್ತು ಕರುಣದಿಂ ಶಂಕರನೆ! ಪೊರೆ ಭುವನಸಂಕುಲವನು ||೨೬||

ಪುಟ್ಟಿದಾರಭ್ಯ ನಾನೀಧರೆಯೊಳೆಳ್ಳನಿತು |
ದಿಟ್ಟಿಯಿಡದೆಸಗಿದಾ ಪಾಪಕೃತ್ಯಂಗಳಂ |
ದಿಟ್ಟಿಸದೆ ಮನ್ನಿಸುವ ಪರಮಕರುಣಾಳು ನೀನಲ್ಲದೆನಗಾರಿರ್ಪರು? ||
ಕೆಟ್ಟವನೆನುತ್ತೆ ತಾಂ ಪೆತ್ತಸುತನಂ ಜನನಿ |
ದಿಟ್ಟಿಸದೆಬಿಡುವಳೇಂ? ನಂಬಿರ್ಪ ಭಜಕರೊಳ್ |
ಕೆಟ್ಟಳ್ಕರಿಲ್ಲವೇಂ? ನಿನಗನಿತು ಶಂಕರನೆ! ಪೊರೆ ಭುವನಸಂಕುಲವನು ||೨೭||

Digitized by ROJA MUTHIAH RESEARCH LIBRARY

ನೆಲಸಿರಲ್ತನ್ನಲ್ಲಿ ವಿವಿಧಕಿಲ್ಬಿಷಚಯಂ |
ಸಲಿಲದಿಂದಂಗಮಂ ಮೇಲೆನಿತು ತೊಳೆದೊಡಂ |
ಮಲರಹಿತನೆನಿಪನೇನದರಿಂದೆ ಸಂತತಂ ಪರಮಪಾವನವೆನಿಸುವ ||
ಲಲಿತತವಸುಗುಣಕಥನಾಮೃತದ ರಸದಿಂದೆ |
ಮಲಿನಮನವಂ ತೊಳೆವನಾವ ನವನೀಧರಾ |
ತಲದಲ್ಲಿ ಕೃತಕೃತ್ಯನೆನಿಸುವನು ಶಂಕರನೆ! ಪೊರೆ ಭುವನಸಂಕುಲವನು ||೨೮||

ನೀರಮೇಲಣ ಗುಳ್ಳೆಯಂದದಿಂ ಕಣ್ಗಳ್ಗೆ |
ತೋರಿ ಕೆಡುವೀದೇಹ ತಾನೆಂದು ನಂಬಿರ್ದು |
ದಾರುಣವೆನಿಪ ಪಂಚವಿಷಯಂಗಳುಪಹತಿಗೆ ಸಿಲ್ಕಿ ಬಳಲುತನವರತ ||
ಕ್ರೂರಕಲ್ಮಷಕರ್ಮಗಳನೆಸಗಿ ಧರೆಯಲ್ಲಿ |
ವಿಾರಿದರಿವರ್ಗದಿಂ ಕಡುನೊಂದಳಲ್ವೆನಗೆ |
ಭೂರಿಕಾರುಣ್ಯರಸವಂ ಬೀರಿ ಶಂಕರನೆ! ಪೊರೆ ಭುವನಸಂಕುಲವನು ||೨೯||

ನೀನೆ ಕೇಶವ ನೀನೆ ಸಿತಿಕಂಠ ನೀನೆ ವಿಧಿ |
ನೀನೆ ಸಖ ನೀನೆ ಜನನೀಜನಕ ನೀನೆ ಗುರು |
ನೀನೆ ಬಾಂಧವ ನೀನೆ ಕೈವಲ್ಯಪತಿ ನೀನೆ ಸಗುಣನಿರ್ಗುಣರೂಕ ||
ನೀನೆ ಗತಿಯೆಂದೊರೆವ ವೇದೋಕ್ತಿಯಂ ನಂಬಿ |
ನಾನೆಡೆವಿಡದೆ ನಂಬಿಹೆನು ತವಪದಾಬ್ಜವಂ |
ನೀನೆನ್ನೊಳೆಣಿಸದಿರು ದೋಷವಂ ಶಂಕರನೆ! ಪೊರೆ ಭುವನಸಂಕುಲವನು ||೩೦||

ನೀರಸುಳಿಯಂತೆ ಸಲೆ ತೋರ್ಪ ಸಂಸೃತಿ ಮಹಾ |
ವಾರಿನಿಧಿಯಲ್ಲಿ ಮುಳುಗಿರ್ದು ನಾಂ ಸಂತತಂ |
ಭೂರಿರಾಗಾದಿವಿಷಯೋರ್ಮಿಮಾಲಾಪರಿಭ್ರಮಣದಿಂ ತಡಿಗಾಣದೆ ||
ಗಾರುಬಡುತಿರ್ಪುದಂ ಕಂಡೆನ್ನ ಕರವಿಡಿದು |
ಘೋರನೆತ್ತಿದ ಪರಮಕಾರುಣ್ಯನಿಧಿ ಚೇರ |
ದಾರುಂಟು? ನಿನ್ನಂತೆ ಲೋಕದೊಳ್ಶಂಕರನೆ! ಪೊರೆ ಭುವನಸಂಕುಲವನು||೩೧||



ಪರಮಕರುಣಾಪಯೋನಿಧಿ! ತಿರೆಯೊಳವತರಿಸಿ |
ನರಲೀಲೆಯಿಂದೆ ನೀಂ ಭಕ್ತಪಾಲನೆಗಾಗಿ |
ಪರಿಕಿಪೊಡೆ ವಾಚಾಮಗೋಚರವೆನಿಪ್ಪತುಳಪರತತ್ವವಿದ್ಯೆಯನ್ನು ||
ಭರದೆಗೋಚರಗೊಳಿಸಿ ವೇದಾನುಭೂತಿಯಿಂ |
ದುರೆ ಬೋಧಿಸಿದ ಶರಣಭರಣನೆಂಬುರುತರದ |
ಬಿರುದಾಂಕ ನಿನ್ನಡಿಗೆ ನಮಿಸುವೆಂ ಶಂಕರನೆ! ಪೊರೆ ಭುವನಸಂಕುಲವನು||೩೨||

ಆರಯ್ಯೆ ನಿನ್ನನೊಲಿಸುವುದಾವಬಗೆಯಿಂದೆ? |
ನಾರದನವೊಲ್ಗಾಯನಂ ಮಾಳ್ಪುದನರಿಯೆನು |
ಮಾರುತಿಯವೊಲ್ಸೇವೆಗೈವುದನರಿಯೆನುಗ್ರತಪದಿಂದೆ ಪಾರ್ಥನಂತೆ ||
ಆರಯ್ದು ಮೆಚ್ಚಿ ಸಲ್ಕರಿಯೆನದುಕತದೆ ತವ |
ಚಾರುನಾಮಸ್ಮರಣಮವಸಾನದಲ್ಲಿ ಸಹ |
ಕಾರಿಯಪ್ಪಂತೆನಗನುಗ್ರಹಿಸು ಶಂಕರನೆ! ಪೊರೆ ಭುವನಸಂಕುಲವನು ||೩೩||

ನಮ್ಮ ಕುಲಮೇಲೆಂದು ಪೊಗಳಿಕೊಳುತುಂ ಮಗುಳ್ದು |
ನಿಮ್ಮ ಕುಲಕೀಳೆಂದು ಪಳಿಯುತುಂ ಕ್ಷಿತಿಯಲ್ಲಿ |
ಹಮ್ಮು ಮಚ್ಚರಗನ್ನಗತಕಮೊದಲಾದದುರ್ಗುಣಗಳಿಂ ಕಾಪುರುಷರು ||
ತಮ್ಮ ಸಂತಾನವಳಿವುದನರಿಯದಾವಗಂ |
ಹಮ್ಮಿಂದೆ ದೂಷಿಸುತೆ ತವಭಕ್ತರಂ ಕಂಡು |
ಸುಮ್ಮನೆ ನರಕಕಿಳಿವರಕಟಕಟ! ಶಂಕರನೆ! ಪೊರೆ ಭುವನಸಂಕುಲವನು ||೩೪||

ಕಪಟತನದಿಂ ಯಾಚಿಸುವ ಮನುಜರಿಳೆಯಲ್ಲಿ |
ಜಪತಪಂಗಳನಾಚರಿಪುದರಿಂ ಫಲಮುಂಟೆ? |
ಕುಪಿತಮತಿಯಂ ಬಿಡದೆ ಸಂತತಮೆಸಗುವಾವ್ರತಂಗಳಿಂ ಸಫಲಮುಂಟೇ? ||
ಚಪಲವಳಿಯದೆ ಹೃದಯದೊಳ್ಜಪಿಪ ಮಂತ್ರದಿಂ |
ಸಫಲವಾಗುವುದುಂಟೆ? ತವಪದಸ್ಮರಣೆಯಿಂ |
ಸುಪಥಫಲಮುಂಟು ನಿಜಭಕ್ತರ್ಗೆ ಶಂಕರನೆ! ಪೊರೆ ಭುವನಸಂಕುಲವನು ||೩೫||

Digitized by ROJA MUTHIAH RESEARCH LIBRARY

ಶ್ರವಣದಿಂ ಕ್ಷಣಮಾತ್ರದೊಳ್ಬಿಡದೆ ಕಾಲುಷ್ಯ |
ನಿವಹಮಂ ಖಂಡಿಪ ಲವಿತ್ರದಂತಿರ್ಪಮಲ |
ತವ ಚರಿತ್ರಾಮೃತವನೀಂಟಿ ಪರಮಾನಂದಜಲಧಿಯೊಳ್ಮುಳುಗದಿನ್ನು ||
ತವಕದಿಂ ಕಿವಿಗೊಟ್ಟುಪಾಳ್ಗತೆಯನಾಲಿಸು |
ತ್ರವನಿಯೊಳ್ಕುಜನಸಂಸರ್ಗದಿಂ ಕಿಡುವ ಮಾ |
ನವನವಂ ಮಾನವನೆನಿಪ್ಪನೇಂ ? ಶಂಕರನೆ ! ಪೊರೆ ಭುವನಸಂಕುಲವನು ||೩೬||

ಕುರುಡಂಗೆ ತೋರಿದೊಡೆ ಮುಕುರದಿಂ ತನ್ನಮುಖ |
ದಿರವುಮಂ ತಾನರಿದು ನೋಳ್ಪನೇಂ ? ಎಡಂಗಿ |
ದಿರಿನಲ್ಲಿ ಚಾಜಿಸಿದೊಡಾಗೀತವಾದ್ಯರವವಂ ಬಿಡದೆ ಲಾಲಿಪನೇಂ ? ||
ಪರಮನೀಚಂಗೆ ಸಂಪತ್ತೊದಗಿದೊಡೆ ತನ್ನ |
ಪರಮನೀಚತ್ವಮಂ ಬಿಡುವನೇಂ ? ದುರ್ಜನರ್ |
ಪರತತ್ವಸಾರವಂ ತಿಳಿವರೇಂ ? ಶಂಕರನೆ ! ಪೊರೆ ಭುವನಸಂಕುಲವನು ||೩೭||

ಉರುತರಚತುಃಕರಣಗಳನಖಿಳವಸ್ತುಸಂ |
ಸ್ಮರಣದಿಂ ನೆನಹು ಬಾರದತೆರದೆ ಬರಸೆಳೆದು |
ವಿರತಿಪವಿಯಿಂ ಪತ್ನಿಪುತ್ರಾದಿಮೋಹವಂ ಚೂರ್ಣೀಕೃತಂ ಗೆಯ್ಯದೆ ||
ವರಪುಣ್ಯಲತೆಯನಾವರಿಪಂತೆ ಬೆಳೆಗೈದು |
ವರಭಕ್ತಿಯಿಂ ಭವಚ್ಚರಣಕಭಿವಂದಿಸದ |
ದುರುಳರ್ಗೆ ಸದ್ಗತಿಯದೆತ್ತಣದು ? ಶಂಕರನೆ ! ಪೊರೆ ಭುವನಸಂಕುಲವನು||೩೮||

ಹಿತವಹಿತವಿದೆನುತ್ತೆ ತಿಳಿದುನಡೆವುದು ಚಂದ |
ಮತಿಗೆಟ್ಟು ವಿಷಯದೊಳ್ಮನಗುಡದಿಹುದು ಚಂದ |
ಸತತಮಾಮ್ನಾಯೋಕ್ತವಿಧಿಮಾರ್ಗವಂ ಬಿಡದೆ ತಾನಾಚರಿಪುದು ಚಂದ ||
ವಿತತದುಷ್ಕೃತ್ಯವಂ ನೇತಿಗಳೆವುದು ಚಂದ |
ಪತಿತಪಾವನವೆನಿಪ ನಿಮ್ಮಂಘ್ರಿ ಸೇವೆಯಿಂ |
ಕ್ಷಿತಿಯಲ್ಲಿ ಮುಕ್ತನಪ್ಪುದು ಚಂದ ಶಂಕರನೆ ! ಪೊರೆ ಭುವನಸಂಕುಲವನು||೩೯||



ಮರೆವೊಕ್ಕಡೇಂ ? ಭವವಿಮುಕ್ತರಂ ಮಾಳ್ಪರೇ |
ನೆರೆಪುಣ್ಯದಿಂ ಸ್ವರ್ಗದಲ್ಲಿರ್ಪದಿವಿಜರ್ಕ್ಕ |
ಳರರೆ ! ಬೇಡಿದಭೀಷ್ಟವಂ ಕುಡುವುವೇಂ ? ನೋಡೆ ಶಾಲ್ಮಲೀವೃಕ್ಷಂಗಳು ||
ಭರದಿಂದೆ ಕಾಮಿತಾರ್ಥವನೀವ ಘನದೇವ |
ತರುವಂತೆ ನೀನೆ ನಿಶ್ಶ್ರೇಯಸವರದನೆಂದು |
ನಿರುತ ಪೂಜಿಸಿ ಭಜಿಸಿ ಬೇಳ್ಪನೈ ಶಂಕರನೆ ! ಪೊರೆ ಭುವನಸಂಕುಲವನು ||೪೦||

ಎಸಗುತಿರ್ಪೆನು ನಿರುತ ದುರಿತಕರ್ಮಂಗಳಂ |
ಪಸುಳೆತನದಿಂದಿದುವರೆಗಮೆಸಗಬಾರದಿದ |
ನೆಸಗಬಹುದೆಂಬಾ ವಿವೇಚನೆಯನರಿಯೆನಾರ್ಜಿತಕರ್ಮಫಲದಿಂದಾಂ ||
ಮಿಸುಪ ಭವದಂಘ್ರಿಬಿಸರುಹಯುಗ್ಮಸನ್ನಿಧಿಯೊ |
ಳಸಮವೆನಿಸಿದ ಪರಮಭಕ್ತಿಯಂ ನಿಚ್ಚಮೆನ |
ಗೊಸೆದು ಕರುಣಿಸು ಪತಿತಸುಪವಿತ್ರ ಶಂಕರನೆ ! ಪೊರೆ ಭುವನಸಂಕುಲವನು||೪೧||

ಅವಿಚಾರದಿಂ ಬರಿವೆ ವಿಷಯಲಂಪಟನಾಗಿ |
ಸವಿಸವಿದು ಮಧುರಾದಿಷಡ್ರಸಪದಾರ್ಥಗಳ |
ನವಿರತಂ ಧನದಾಸೆಗಾಗಿ ಪರರಂ ಪೀಡಿಸುತದರಿಂ ಸುಖಿಪೆನೆಂದು ||
ತವೆ ಭಾವಿಸಿರ್ಪೆನ್ನೊಳಿನಿಸುಂ ಕರುಣವಿಡದೆ |
ಜವನಾಳ್ಗಳೈತರ್ಪುದಂ ಕಾಣೆನದುಕತದಿಂ |
ಭವದಂಘ್ರಿವಿಡಿದಿರ್ಪೆನೈ ದೇವ ! ಶಂಕರನೆ ! ಪೊರೆ ಭುವನಸಂಕುಲವನು ||೪೨||

ಸುರರಮೃತವಂ ಪುಷ್ಪರಸವನಳಿಸಮುದಾಯ |
ಮರವಿಂದವನವನರಸಂಜೆಗಳ್ಕುಲವನಿತೆ |
ಪುರುಷನಂ ಬಿಡದಿಂದುವಂ ಜೊನ್ನವಕ್ಕಿಗಳ್ಚಾತಕಂ ಜಲಧರವನು ||
ನಿರುತವಾಶ್ರಯಿಸಿ ಜೀವಿಸುವಂತೆ ಭವದಂಘ್ರಿ |
ಸರಸಿಜಾಶ್ರಯದೆ ಜೀವಿಪುದನರಿದಿರ್ದೊಡಂ |
ಮರೆದಿರ್ಪುದೇಕೆ ? ನೀಂ ಕೃಪೆದೋರು ಶಂಕರನೆ ! ಪೊರೆ ಭುವನಸಂಕುಲವನು||೪೩||

Digitized by ROJA MUTHIAH RESEARCH LIBRARY

ವೇದಶಾಸ್ತ್ರಾಗಮ ಪುರಾಣೇತಿಹಾಸಗಳ |
ಹಾದಿಯಂ ನಾನರಿಯೆನಕಟ! ವಾದಂಗೈದು |
ಸಾಧುಸಜ್ಜನರಲ್ಲಿ ಸುವಿಮರ್ಶೆಗೆಯ್ವುದನರಿಯದೆ ಮತಿಹೀನನಾದೆಂ ||
ವಾದಾತಿದೂರ ಕರುಣಾಂಬುನಿಧಿ ! ನೀನೆನಗೆ |
ಭೇದವಿರಹಿತ ಪಾರಮಾರ್ಥಸುಜ್ಞಾನವಂ |
ಬೋಧಿಸಿ ಕೃತಾರ್ಥನಂ ಮಾಳ್ಪುದೈ ಶಂಕರನೆ ! ಪೊರೆ ಭುವನಸಂಕುಲವನು||೪೪||

ಮಾನಹೀನರ ಸಂಗವಂ ತೊರೆಯಲಿಲ್ಲವೈ |
ಜ್ಞಾನಿಗಳನೊಮ್ಮೆ ಕರೆದುಪಚರಿಸಲಿಲ್ಲವೈ |
ಪಾನಾನ್ನಗಳನುಳಿದು ಜಪತಪಾದಿವ್ರತಂಗಳನೊಮ್ಮೆ ಮಾಡಲಿಲ್ಲ ||
ದೀನಪಾಲಕ ! ನನ್ನೊಳಿರ್ಪಖಿಳದೋಷಕ |
ಠ್ಮಾನೀಕಮಂ ಕ್ಷಮಿಸು ಪತಿತಪರಿಶುದ್ಧಾಬ್ಧಿ |
ಧಾನನೆನಿಪಾಬಿರುದು ಧರಿಸಿರ್ಪ ಶಂಕರನೆ! ಪೊರೆ ಭುವನಸಂಕುಲವನು ||೪೫||

ಭಾವಜಾಂತಕ ! ಪಿಂತೆ ನವವಿಧದಭಕ್ತಿಯಿಂ |
ಭಾವಪರಿಶುದ್ಧಿಯಿಂ ಗೈದ ನಿಜಭಕ್ತರ್ಗೆ |
ಸಾವು ಹುಟ್ಟುಗಳಿಲ್ಲದಂತೆ ಮಾಡಿದ ದಯಾಪರಮೂರ್ತಿ ನೀನೆನ್ನುತ ||
ಆವಗಂ ಬಿಡದೆ ನಾನಮಳಭವದಂಘ್ರಿರಾ |
ಜೀವಯುಗವಂ ನಂಬಿರುವೆನಾವಗಂ ಭಕ್ತಿ |
ಭಾವಕೊಲ್ದಧಿಕಸುಪ್ರೇಮದಿಂ ಶಂಕರನೆ! ಪೊರೆ ಭುವನಸಂಕುಲವನು ||೪೬||

ವರಭಕ್ತಿಸುಲಭ ದೇವೇಶ! ತವಪದಯುಗವ |
ನುರುಭಕ್ತಿಯಿಂ ತನ್ನ ಹೃದಯಾರವಿಂದದೊಳ್ |
ನೆರೆ ಪೂಜಿಸದೆ ಮಗುಳ್ದೊಮ್ಮೆ ಜಾನಿಸದೆ ಮರೆದಿಹ ಮೂಢಮಾನವಂಗೆ ||
ಧರೆಯೊಳಾಯುಸವಿಲ್ಲದಿರ್ಪ ಮರಣಂ ಮಗುಳೆ |
ಪರರಲ್ಲಿ ಯಾಚಿಸದ ಜೀವನಂ ಪರಿಕಿಪೊಡೆ|
ದೊರೆಕೊಳ್ಗುಮೇನು? ತಾಮಿವು ಬರಿದೆ ಶಂಕರನೆ! ಪೊರೆಭುವನಸಂಕುಲವನು||೪೭||



ಪಂಚಮುಖಶಿವನೆಂದು ಕುಳಿತಿರಲ್ಕರಲಿಜಂ |
ವಂಚಿಸುತೆ ತಾನಂದು ಸಭೆಯಲ್ಲಿ ಪಾರ್ವತಿಯ |
ಸಂಚುವನರಿದು ದೇವ! ನೀನವನ ಶಿರವನಾರುಂ ತಿಳಿಯದಂತರಿದಯ್ ||
ವಂಚಿಸಿದೊಡೇನಖಿಳಜೀವಿಗಳ ಸೃಷ್ಟಿಯೆ ವಿ |
ರಂಚಿಯದೆನುತುಸಿರ್ವ ಮಾತು ಸಟೆಯಾಯ್ತಲ್ತೆ ? |
ಸಂಚಿತಫಲವದಾರ್ಗೆ ತಪ್ಪುವುದು ? ಶಂಕರನೆ ! ಪೊರೆ ಭುವನಸಂಕುಲವನು||೪೮||

ವರತೀರ್ಥಯಾತ್ರೆಗಳನೆಸಗಿ ಬಳಲಿದೆನಮಮ ! |
ನೆರೆವಿವೇಚಿಸಿ ನೋಡಿದೊಡೆ ನನ್ನೊಳಿರ್ಪಖಿಳ |
ಪರನಿಂದೆ ಕೌಟಲ್ಯಪರವಧೂಸಂಗಮೋಹಾದಿ ದುರ್ಗುಣಗಳಲ್ಲಿ ||
ಭರದಿನೊಂದೊಂದೆ ತವಿಸುವುದು ಶತಯಾತ್ರೆಗಳ |
ವರಸುಕೃತಫಲವನೆಂದರಿದು ನಾಂ ಭವದಂಘ್ರಿ |
ಸರಸಿಜಕೆರಗಿ ಶರಣ್ವೊಕ್ಕೆನೈ ಶಂಕರನೆ ! ಪೊರೆ ಭುವನಸಂಕುಲವನು ||೪೯||

ಎತ್ತಿದಾ ವಿವಿಧದೇಹಂಗಳಿಂದಳಲಿದೆಂ |
ಸುತ್ತಿದೆಂ ವಿವಿಧದೇಶಂಗಳಂ ಪೊಡೆಗಾಗಿ |
ಕತ್ತೆಯಂದದೆ ದುಡಿದುಡಿದು ಬಳಲಿದೆಂ ನಿತ್ಯಮೆಂದು ಸತಿಸುತಧನಗಳು ||
ಮತ್ತೆಸಗಿದಖಿಳಕರ್ಮಂಗಳಂ ಮನ್ನಿಸಯ್ |
ಚಿತ್ತಕಿನಿತುಂ ಮರುಕಬಾರದೇಂ ? ಗತಿನೀನೆ |
ನುತ್ತೆ ನಂಬಿರ್ಪ ಸೇವಕನಲ್ಲಿ ಶಂಕರನೆ ! ಪೊರೆ ಭುವನಸಂಕುಲವನು ||೫೦||

ಬಿಡದಿರ್ಪೆನನುದಿನಂ ಭವದಂಘ್ರಿಯುಗ್ಮವಂ |
ಬಿಡೆನಜನ ಶಿರದೋಡುವಿಡಿದಲೆಯುತಿರ್ದೊಡಂ |
ಮಡದಿಯಂ ಬಿಡದಪ್ಪಿ ಸಂಭ್ರಮಂಬಡುತಿರ್ದೊಡಂ ಬಿಡೆನು ಕೋಪವೇಕೆ ? ||
ಬಡವಾದ ಮುದಿಯೆತ್ತನೇರಿ ಪೋಗುತ್ತಿರಲ್ |
ಬಿಡೆನಭವ ! ಘೋರರೂಪವನಾಂತೊಡಂ ಬಿಡೆನು |
ಕುಡು ನನ್ನಭೀಷ್ಟವಂ ಕೃಪೆಯಿಟ್ಟು ಶಂಕರನೆ ! ಪೊರೆ ಭುವನಸಂಕುಲವನು ||೫೧||

Digitized by ROJA MUTHIAH RESEARCH LIBRARY

ಎಲೆ ದೇವ! ನಿನ್ನಯ ವಿವಿಧಲೀಲೆಗಳನಿಂತು |
ತಿಳಿದೇನೆನುತೆ ನಂಬಿ ಭಜಿಸವೇಳ್ಕುಂ ನೋಡೆ |
ಕಲಿಯೆಂದು ಪೇಳ್ದೊಡಾಫಲ್ಗುಣನ ಬಿಲ್ಲ ಪೆಟ್ಟನೆ ತಿಂದು ನೀನಿರ್ಪಯ್ ||
ಸಲೆ ವಿರತನೆಂದುಸಿರೆ ಸತಿಯನೆಡೆವಿಡದಿರ್ಪೆ |
ಚೆಲುವನೆಂದೊಡೆ ರುಂಡಮಾಲೆಯಂ ತಳೆದಿರ್ಪೆ |
ಬಲುಹಿರಿಕಿರಿಯನೆಂದರಿವುದೆಂತು ? ಶಂಕರನೆ! ಪೊರೆ ಭುವನಸಂಕುಲವನು ||೫೨||

ಮಂದಿರವನುಳಿದು ಪರ್ವತದಗ್ರದಲ್ಲಿರ್ಪ |
ಕಂದರದೊಳಡಗಿ ತಾನಿರ್ದು ಸವಿಯದೆ ಪಸಿಯ |
ಕಂದಮೂಲಂಗಳಂ ಮೇಣಂಗವಂ ಕಂದಿಕುಂದಿಸದೆ ಹೃದಯದಲ್ಲಿ ||
ಒಂದುಸೂಳುಚ್ಚರಿಸೆ ತವ ನಾಮವಂ ಬಿಡದೆ |
ಹಿಂದೆ ಭವಭವದಲ್ಲಿ ಮಾಡಿದಘಸಮುದಯಂ |
ಬೆಂದುಪೋಪುದು ನಿಮಿಷಮಾತ್ರದಿಂ ಶಂಕರನೆ! ಪೊರೆಭುವನಸಂಕುಲವನು||೫೩||

ಬೇಡುವೆನೆ ಅಮೃತಾನ್ನವಂ ಕಾಲಕೂಟವ್ನೈ |
ಬೇಡುವೆನೆ ವಸನವಂ ಸೆಡೆದ ಗಜಚರ್ಮವ್ನೈ |
ಬೇಡುವೆನೆ ಗಂದವಂ ಶವಭಸ್ಮವ್ನೈ ಬೇಡುವೆನೆ ಭೂಷಣವನಹಿಗಳು ||
ಬೇಡುವೆನೆ ರಾಜಗೃಹವಂ ಪ್ರೈತೃವನಭೂಮಿ |
ಬೇಡೆನಿನ್ನೊಂದನಾನನ್ಯರಂ ಸಂತತಂ |
ಬೇಡದಂತೆನ್ನಲ್ಲಿ ಕೃಪೆದೋರು ಶಂಕರನೆ! ಪೊರೆಭುವನಸಂಕುಲವನು ||೫೪||

ಪರಿಕಿಪೊಡೆ ವಂಚಿಸುತೆ ಶಿಷ್ಯರಾಧನವನಪ |
ಹರಿಪ ನೆಪದಿಂ ದಂಡಕಾಷಾಯಗಳನಾಂತು |
ಪರಿಪರಿಯ ವೇಷದಿಂ ತೋರ್ಪ ಗುರುಗಳವಿರಳವಾದೊಡೇನವನಿಯಲ್ಲಿ ||
ನೆರೆ ನಂಬಿರುವ ಶಿಷ್ಯವರ್ಗಹೃತ್ತಾಪಮಂ |
ಭರದಿಂ ಕಳೆದಪವರ್ಗವನೀವ ನೈಜ ಸ |
ದ್ಗುರುವು ನೀನಲ್ಲದಿನ್ನಾರುಂಟು ? ಶಂಕರನೆ! ಪೊರೆ ಭುವನಸಂಕುಲವನು ||೫೫||



ಬಂದೆನೀಧರೆಗೆ ನಿನ್ನಂಮರೆದು ಸಂಸಾರ |
ಬಂಧನದೊಳುರೆ ಸಿಕ್ಕಿ ನೊಂದೆನಜ್ಞಾನಗಾ |
ಢಾಂಧದೊಳ್ಬಿದ್ದಂಧಕನ ತೆರದೆ ಮುಂದಣ ಪಥವನರಿಯದಧಮನಾಗಿ ||
ಇಂದುಧರ! ನಿನ್ನಂಘ್ರಿಸೇವೆಗೈವುದನುಳಿದು |
ಮಂದಮತಿಯಿಂ ಕೆಟ್ಟೆನಕಟಕಟ! ನಾಂ ಬಾಲ |
ನೆಂದುಪೇಕ್ಷಿಸದೆ ಕೃಪೆಯಿಂ ನೋಡು ಶಂಕರನೆ! ಪೊರೆ ಭುವನಸಂಕುಲವನು||೫೬||

ಪಿರಿದೆನಿಪುದಖಿಲಪಾಪಂಗಳೊಳ್ವೈರನಿಂದೆ |
ಪಿರಿದೆನಿಪುದಖಿಲ ಧರ್ಮಂಗಳೊಳ್ಪರರಕ್ಷೆ |
ಪಿರಿದೆನಿಪುದಖಿಲ ಸದ್ಗುಣದುರ್ಗುಣಂಗಳೊಳ್ಘನಶಾಂತಿಲುಬ್ಧತ್ವವು ||
ಪಿರಿದೆನಿಪುದಖಿಲ ಜನ್ಮಂಗಳೊಳ್ನರಜನ್ಮ |
ಪಿರಿದೆನಿಪುದಖಿಲ ಭಾಗ್ಯಂಗಳೊಳ್ವೈರಾಗ್ಯ |
ಪಿರಿದೆನಿಪುದಖಿಲ ಪದದೊಳ್ಮುಕ್ತಿ ಶಂಕರನೆ! ಪೊರೆ ಭುವನಸಂಕುಲವನು ||೫೭||

ಆರೂರ್ಮಿಗಳ್ಪೀಡಿಸುತ್ತಿರ್ಪುವೇಗಳುಂ |
ಮೂರುತಾಪಂಗಳೆನ್ನಂ ದಹಿಸುತಿರ್ಪುವ್ನೈ |
ಕ್ರೂರವೈರಿಗಳಂತೆ ಮುಸಗಿ ಪಂಚಕ್ಲೇಶಗಳ್ಗಾರುಬಡಿಸುತಿಹುವು ||
ಆರುಮಂದಿಗಳೆನ್ನ ನೆಡೆವಿಡದೆ ಘುಡಿಘುಡಿಸಿ |
ಹೋರುತುಂ ಕೊಲ್ವುವೀಪರಿಭವದೊಳಾಂ ನೋಯ |
ಲಾರೆನ್ನೈ ನಿತ್ಯಸುಖವಿತ್ತೆನಗೆ ಶಂಕರನೆ! ಪೊರೆಭುವನಸಂಕುಲವನು ||೫೮||

ಕಾಮಿನೀಜನರ ಲಾವಣ್ಯಕ್ಕೆ ಬೆರಗಾಗಿ |
ಕಾಮಶರಹತಿಯಿಂದೆ ತಾಳಲಾರದೆ ವೃಥಾ |
ತಾಮರಸಶರನಾಟದೊಳ್ಕೂಡುತತ್ತ್ಯಾಶೆಯಿಂ ಬಯಸಿ ಗೃಹಧನವನು ||
ಪ್ರೇಮದಿಂ ತೊಳಲಿ ಬಳಲುತ್ತೆ ನಿನ್ನಂ ಮರೆದು |
ತಾಮಸದೊಳಾಂ ಮುಳುಗಿ ಪೋದೆನ್ನೈ ಕರುಣವಿಡು |
ಕಾಮಹರ! ನಿನ್ನ ಬಾಲಕನೆಂದು ಶಂಕರನೆ! ಪೊರೆ ಭುವನಸಂಕುಲವನು ||೫೯||

Digitized by ROJA MUTHIAH RESEARCH LIBRARY

ಕಿಡುವ ತನುವಂ ನೆಚ್ಚಿ ಲೌಕಿಕಕೆ ಮನಗೊಟ್ಟು |
ಕಡುಮಮತೆಯಿಂ ಮೆಚ್ಚಿ ಮದದಿಂದೆ ಗುರುಹಿರಿಯ |
ರಡಿಗೆರಗದೆಲ್ಲರಂ ಜರಿಯುತ್ತೆ ಹೇಮಾದಿಗಳೆ ನಿತ್ಯವೆಂದು ತಿಳಿದು ||
ಕಡೆಗೆ ಜವನೆಡೆಗೈದುವುದುಚಿತವೆ ? ಜಿಹ್ವೆಯೊಳ್ |
ದೃಢದೆ ಪಠಿಸುವ ನಿನ್ನ ನಾಮದಿಂ ಕಲುಷಮಂ |
ಬಿಡದೆ ಕಳೆದೀಡಾಡುವುದೆ ಲೇಸು ಶಂಕರನೆ ! ಪೊರೆ ಭುವನಸಂಕುಲವನು ||೬೦||

ಧನಮಹಿಮೆಯಂ ಬಣ್ಣಿಸಲ್ಕರಿದು ಪೂರ್ವಿಕರ್ |
ಧನದಿಂದಮಾವಾವ ಗತಿವಡೆದರೆಂಬುದಂ |
ಮನದಂದು ಬೇಳ್ಪೆನಾನೀಗಳುಂ ಭೋ, ದೇವ ! ಬೇಡಿದನಿತೈಶ್ವರ್ಯವ ||
ಕನಿಕರದೊಳೀವುದದು ಸಾಜಮದರಿಂ ಗರ್ವ |
ಮೆನಗುದಿಸಿ ಕಿಡುವೆನ್ನೈಸಿರಿಯಿಂದೆ ಕೊನೆಗೆ ಬಡ |
ತನಮೆ ಮೇಲಲ್ತೆ ? ಧಾರಿಣಿಯಲ್ಲಿ ಶಂಕರನೆ ! ಪೊರೆ ಭುವನಸಂಕುಲವನು ||೬೧||

ಆಸೆಯೆಂಬುವ ಪಾಶದಿಂ ಬದ್ಧನೆಂದೆನಿಸಿ |
ಸಾಸದಿಂ ಪರಸೇವೆಗೈದು ನಿರುತಂ ಭೋಗ |
ದಾಸಾಧನೆಗೆ ವಿವಿಧವೃತ್ತಿಗಳನೆಸಗುತ್ತೆ ಧನವನಾರ್ಜಿಸಿ ತಿಳಿಯದೆ ||
ಕ್ಲೇಶಪಂಚಕದತ್ತಣಿಂ ನೊಂದು ನಾಂ ಬರಿದೆ |
ಘಾಸಿಯಾಗುತ್ತಿರ್ಪೆನ್ನೈ ಬೇಗಪೋಷಿಸೈ |
ದಾಸನೆನಿಸಿರ್ಪೆನ್ನನನುದಿನಂ ಶಂಕರನೆ ! ಪೊರೆ ಭುವನಸಂಕುಲವನು ||೬೨||

ಒಡಲ ಗುಣವೆನಿಪ ಜರೆಮರಣಂಗಳಡಿಗಡಿಗೆ |
ಬಿಡದೆ ಪೆರ್ಬುಲಿಯಂತಡರಿ ಬಾಧೆವಡಿಸುತ್ತೆ |
ಕಡುದುಕ್ಕಮಮತೆಗಳ್ಮನದ ಗುಣವೆನಿಸಿ ದಾಯಾದ್ಯರಂತೆನ್ನ ಮುಕ್ಕಿ ||
ಬಿಡುವುವೀಹಸಿತೃಷೆಗಳುಂ ಹರಣಗುಣವೆನಿಸಿ |
ತುಡುಗುಣಿಗಳಂತೆಡೆವಿಡದೆ ಮುತ್ತಿಹಿಂಸಿಪುವು |
ಕಿಡಿಸು ಜನಿಪುದನೆಂತು ಸೈರಿಸುಗೆ ? ಶಂಕರನೆ ! ಪೊರೆ ಭುವನಸಂಕುಲವನು ||೬೩||



ಮಹಿಯಲ್ಲಿ ಕಪಿಯ ಹಿಡಿತಂದು ಜನರಾಡಿಪರು |
ಸಹಜಮಂತುಟೆ ನನ್ನ ಮನವೆಂಬ ಮರ್ಕಟನ |
ಬಹುಹಿಂಸೆಯಂ ತಾಳಲಾರೆನಿದು ದೇವ ! ವಿಷಯೋರ್ವಿಜಂಗಳ್ಗಡರ್ದು ||
ಬಹಳಶಾಖಾಗ್ರಂಗಳೊಳ್ಸಂಚರಿಸಿ ಕೆಮ್ಮ |
ನಿಹಪರಕೆ ಸುತ್ತಿ ಸುಳಿಸುವುದೆನ್ನನನವರತ |
ಮಹಹ ! ತವ ಪದಕೊಪ್ಪಿಸಿದೆನಿದಂ ಶಂಕರನೆ ! ಪೊರೆ ಭುವನಸಂಕುಲವನು ||೬೪||

ಸಹನಗುಣದಿಂದರುಗಳುಂ ಮಿತ್ರರಪ್ಪರೀ |
ಸಹನಗುಣದಿಂ ಸಕಲದುಃಖಂಗಳಳಿವುವೀ |
ಸಹನದಿಂದಹಹ ! ಸಮನಿಪುವು ನಿಃಶ್ರೇಯಸಾದ್ಯಖಿಲಾರ್ಥಸಾಧನೆಗಳು ||
ಸಹನಮೆಂಬುದದೊಂದು ಮಂಡನಮೆನಿಪುದರಿಂ |
ಸಹನಗುಣಮಿರವೇಳ್ಕುಮೆಂದುಮೆಲ್ಲರ್ಗಮಾ |
ಸಹನದಿಂದಮೆ ತುಷ್ಟಿಯಪ್ಪೆ ನೀಂ ಶಂಕರನೆ ! ಪೊರೆ ಭುವನಸಂಕುಲವನು ||೬೫||

ಶ್ರೀಮಹೀಭೃದ್ವರಕುಮಾರಿವರ ಜಾಹ್ನವೀ |
ಭಾಮಿನೀಧರನಾದೊಡಂ ಮಸಗಿ ಸುಡುತಿರ್ಪ |
ಕಾಮಾದ್ಯಸುರರಿಂ ಮೃಕಂಡುಸುತಮುಖ್ಯಭಕ್ತಗ್ರ್ಗಡಸಿದುಪಹತಿಯನು ||
ನೇಮದಿಂ ತೊಲಗಿಸಲ್ಕರಲೀಲೆಯಾಂತು ನಿ |
ಷ್ಕಾಮ ಹೃದಯಾವಾಸ ಕಾಮಹರನೆನಿಸಿದಾ |
ಶ್ರೀಮಜ್ಜಗದ್ಗುರುವಿರೂಪಾಕ್ಷ ಶಂಕರನೆ ! ಪೊರೆ ಭುವನಸಂಕುಲವನು ||೬೬||

ಭಕ್ತಿಯೆಂಬುದದಿಲ್ಲವೆನ್ನೊಳಗೆ ಪರಿಕಿಪೊಡೆ |
ಮುಕ್ತಿಯೆಂಬುದು ಬರಿಯಮಾತಿನಿಂ ಸಿದ್ಧಿಸದು |
ಭಕ್ತಿಯಿಲ್ಲದೊಡೆ ನೀಂ ಯುಕುತಿಗೊಲಿವವನಲ್ಲವೆಂದರಿಯದಾಂ ಸುಮ್ಮನೆ ||
ಭುಕ್ತಿಗೋಸುಗವಳಿದುದನ್ಯಕೈಂಕರ್ಯದಿಂ |
ಶಕ್ತಿಯೆಲ್ಲಂ ನಿಷ್ಕರುಣಮುಂಟೆ ? ನಿನ್ನೊಳಗೆ |
ಮುಕ್ತಿಪ್ರದಾಯಕನೆನಿಪ ನಿತ್ಯ ಶಂಕರನೆ ! ಪೊರೆ ಭುವನಸಂಕುಲವನು ||೬೭||

Digitized by ROJA MUTHIAH RESEARCH LIBRARY

ಪರರುಕ್ತಿಗಳ್ಗೆ ಕಿವಿಗುಡದಿರ್ಪನುತ್ತಮಂ |
ಪರಸತಿಯರಂ ತಾಯವೊಲ್ತಿಳಿವನುತ್ತಮಂ |
ಪರರ ನಿಂದಾಸ್ತೋತ್ರಗಳ್ಗೆ ತಗ್ಗದೆ ಹಿಗ್ಗದಿರ್ಪನುತ್ತಮನೆನಿಪನು ||
ಸಿರಿಬಡತನವನೋರಗೆಂದರಿವನುತ್ತಮಂ |
ಶರಣಜನಸಂರಕ್ಷ ! ಭವದಂಘ್ರಿಸೇವೆಯಿಂ |
ಪರಮಗತಿವಡೆವನತ್ಯುತ್ತಮಂ ಶಂಕರನೆ! ಪೊರೆ ಭುವನಸಂಕುಲವನು ||೨೮||

ಎನ್ನ ಜಿಹ್ವೆಗೆ ನಿನ್ನ ನಾಮಪಠನೆಯೆ ಮಧುರ |
ಮೆನ್ನ ಕರ್ಣಕೆ ನಿನ್ನ ಚರಿತಶ್ರವಣವೆ ಹಿತ |
ಮೆನ್ನ ಹೃದಯಕೆ ನಿನ್ನತುಲಮಹಾಮಂತ್ರಜಾಲವೆ ಸುಖಾಮೃತಮೆನಿಪುದು ||
ಎನ್ನಹಸ್ತಕೆ ನಿನ್ನ ಚರಣಪೂಜೆಯೆ ಭೂಷ |
ಮೆನ್ನ ನೇತ್ರಕೆ ನಿನ್ನ ಸಂದರ್ಶನವಮೋಘ |
ಮಿನ್ನುಭಕ್ತಿಯೆ ಮುಕ್ತಿಗಗ್ಗಳಂ ಶಂಕರನೆ ! ಪೊರೆ ಭುವನಸಂಕುಲವನು ||೨೯||

ಕಲಿತಶಾರೀರಮಲಮುಂ ಶುದ್ಧಿಯಪ್ಪುದೀ |
ಜಲದಿಂದೆ ಮನುಜನಂಗಾಂಗಂಗಳೆಲ್ಲಮುಂ |
ವಿಲಸಿತಾಮಳಭಸ್ಮದಿಂದೆ ಪರಿಶುದ್ಧಿವಡೆದಪುವು ವಸುಧೆಯಲ್ಲಿ ದೇವ ! ||
ಸಲೆ ಪರಿಕಿಪೊಡೆ ಮಂತ್ರಜಾಲಪರಿಪಠನೆಯಿಂ |
ಮಲರಹಿತಮೆನಿಪುದೀಸ್ವಾಂತಮೆಂದುಂ ಕಡೆಗೆ |
ತಿಳಿವಿಂದೆ ದೊರೆದಪುದು ಪರಪದಂ ಶಂಕರನೆ ! ಪೊರೆ ಭುವನಸಂಕುಲವನು ||೨೦||

ಆರನೊಲಿಸುಗೆ ? ಡಂಭದಿಂದಂತರಂಗದೊಳ್ |
ಘೋರತರಭಾವಮಂ ತಳೆದು ಬಹಿರಂಗದೊಳ್ |
ಭೂರಿನಮ್ರತೆಯಿಂ ನಟಿಸಿದೊಡೇನೊಳಗಪ್ಪ ಕೃತ್ಯವಂ ಜನರರಿವರೇ ? ||
ಮಾರಮರ್ದನ ! ಮನ್ಮನಾಗಾರದಲ್ಲಿ ನೀಂ |
ರಾರಾಜಿಪುದರಿಂದೆ ಮನಕಂಜಿ ನಡೆಯಲ್ಕೆ |
ದೂರ ನೀಂ ತ್ಯಜಿಸಿ ಪೋಗುವನಲ್ಲ ಶಂಕರನೆ ! ಪೊರೆ ಭುವನಸಂಕುಲವನು ||೨೧||



ಬ್ರಹ್ಮವೆನಿಸುವುದನ್ನವಸ್ತ್ರವೇ ಬಡವರ್ಗೆ |
ಬ್ರಹ್ಮವೆನಿಪುದು ಘಳಿಸಿದರ್ಥವೇ ಜಿಪುಣರ್ಗೆ |
ಬ್ರಹ್ಮವೆಂದೆನಿಸುವುದು ನಿಜಪತ್ನಿಪುತ್ರರೇ ಶುದ್ಧಲೌಕಿಕ-ಜನರ್ಗೆ ||
ಬ್ರಹ್ಮವೆನಿಸುವುದಂಗಸೌಖ್ಯವೇ ಸುಖಿಗಳ್ಗೆ |
ಬ್ರಹ್ಮವೆನಿಸುವುದಾತ್ಮತತ್ತ್ವವೇ ಭಜಕರ್ಗೆ |
ಬ್ರಹ್ಮವೆನಿಸಿರ್ಪೆ ನೀಂ ಸಕಲರ್ಗೆ ಶಂಕರನೆ ! ಪೊರೆ ಭುವನಸಂಕುಲವನು ||೨೨||

ನಿನ್ನ ಮರೆವೊಕ್ಕ ಮಾರ್ಕಂಡೇಯ ತಾನಂದು |
ತನ್ನಂತಕನ ಭಯವ ಪರಿಹರಿಸಿಕೊಂಡನೈ |
ನಿನ್ನನಾನೆಂದು ನಂಬಿರ್ದ ನಿಜಭಕ್ತರ್ಗೆ ಭಯಮುಂಟೆ ? ಮೂಜಗದೊಳು ||
ಎನ್ನ ಭವಭೀತಿಯಂ ಕಳೆವೊಡೆ ಕರುಣದಿಂ ಪ್ರ |
ಸನ್ನನಾಗೆಂದವಿರತಂ ಪನ್ನಗಾಭರಣ ! |
ನಿನ್ನನಾಂ ಪ್ರಾರ್ಥಿಸುತ್ತಿರ್ಪೆನೈ ಶಂಕರನೆ ! ಪೊರೆ ಭುವನಸಂಕುಲವನು ||೨೩||

ತನ್ನಲ್ಲಿ ನಿಜವಿಲ್ಲದಿಹ ಸಾಧುತನವೇಕೆ ? |
ಮುನ್ನಮೆ, ಕರುಣಶಾಂತಿಯಿಲ್ಲದಿಹ ತಪವೇಕೆ ? |
ಉನ್ನತದ ಪಾರಮಾರ್ಥಜ್ಞಾನವಿಲ್ಲದಿರ್ಪಾಶಾಸ್ತ್ರ-ನಿಚಯವೇಕೆ ? ||
ಭಿನ್ನಭೇದಂಗಳಂ ಕಳೆಯದನುಭವವೇಕೆ ? |
ನಿನ್ನಿಯಿಂ ಮುಕ್ತಿವಡೆವುದಕೆ ತಾನಾರೆಂದು |
ಮುನ್ನವರಿಯದ ನರಜನುಮವೇಕೆ ? ಶಂಕರನೆ ! ಪೊರೆ ಭುವನಸಂಕುಲವನು||೨೪||

ಕೋಪವೆಂದೆಂಬ ಪೆರ್ಬುಲಿಗಳಂ ತನ್ನೊಳಿಹ |
ಪಾಪವೆಂದೆಂಬ ತಿರುಗುವ ವರಾಹಂಗಳಂ |
ಚಾಪಲ್ಯಗುಣವೆಂಬ ಮೃಗಗಳಂ ಮಾತ್ಸರ್ಯವೆಂಬ ಘನಕೇಸರಿಯನು ||
ಕಾಪಟ್ಯವೆಂಬ ಜಂಬುಕಗಳಂ ಸದ್ಭಕ್ತಿ |
ಚಾಪದೊಳ್ಪೂಡಿ ತಿಳಿವಂಬಿನಿಂ ಕೆಡಹುವವ |
ನೀಪೃಥ್ವಿಯೊಳ್ಪಾರಮಾರ್ಥಿ ತಾಂ ಶಂಕರನೆ ! ಪೊರೆ ಭುವನಸಂಕುಲವನು ||೨೫||

Digitized by ROJA MUTHIAH RESEARCH LIBRARY

ಎನ್ನೊಳೇಂ ಧರ್ಮಜನವೋಲ್ಭೂತದಯೆಯುಂಟೆ ? |
ಎನ್ನೊಳೇಂ ಶುಕಮುನಿಯ ತೆರದಿಂ ವಿರತಿಯುಂಟೆ ? |
ಎನ್ನೊಳೇಂ ವರಹರಿಶ್ಚಂದ್ರನಂತುನ್ನತದ-ನಿಜಮುಂಟೆ ? ಪರಿಕಿಸಿದೊಡೆ ||
ಎನ್ನೊಳೇಂ ಸನಕನಂತುರುತರದ ತಪವುಂಟೆ ? |
ಎನ್ನ ಗುಣಗಳಿಗಾನೆ ಹಿಗ್ಗುತಿರ್ದೊಡದೆಂತು |
ಮುನ್ನ ಮೊಲಿಯುವೆ ? ದೇವ ! ನೀನೆನಗೆ ಶಂಕರನೆ ! ಪೊರೆ ಭುವನಸಂಕುಲವನು ||

ಕೊಟ್ಟು ಹುಟ್ಟದೆ ಬೇಡೆ ಸಂಪತ್ತು ಬಂದೊಡಂ |
ಕಟ್ಟಕಡೆಗದು ನಶಿಸಿಪೋಗಲ್ಕೆ ದುಕ್ಕಿಸುತೆ |
ಸಿಟ್ಟಿನಿಂ ನಿನ್ನನುರೆ ಬೈದುದಕೆ ಮುಂದೆ ತಿರೆಯಲ್ಲಿ ಬಹುಕಷ್ಟಗಳನು ||
ಪುಟ್ಟಿ ತಾನನುಭವಿಪುದೆಂಬುದಂ ತಿಳಿದು ಮನ |
ಮುಟ್ಟಿ ಬೇಡುವೆನಿಂದು ಮಾಡಿದಪರಾಧವಂ |
ಕಟ್ಟಳ್ಕರಿಂ ಮನ್ನಿಸೆಂದು ನೀಂ ಶಂಕರನೆ ! ಪೊರೆ ಭುವನಸಂಕುಲವನು ||೭೭||

ಆರುಂ ಸಹಾಯಕರ್ತನಗಿಲ್ಲವೆಂದು ತಾಂ |
ಹಾರಯಿಸಿ ಬರಿದೆ ಬಳಲುತ್ತೆ ನಿನ್ನಂ ಮರೆದು |
ದಾರಿಯಾವುದು ಮುಂದೆ ಮಕ್ಕಳ್ಗೆನುತೆ ಗೆತ್ತು ದುಃಖಿಪುದು ಮೋಹವಲ್ತೇ ? ||
ಮೂರುಲೋಕಂಗಳಂ ಗರ್ಭದೊಳಿರಿಸಿಕೊಂಡು |
ಕಾರುಣ್ಯದಿಂ ತುತ್ತನಿಕ್ಕಿ ಸಂರಕ್ಷಿಸುವ |
ಭಾರಕರ್ತನು ನೀನಹುದು ದೇವ ! ಶಂಕರನೆ ! ಪೊರೆ ಭುವನಸಂಕುಲವನು ||೭೮||

ಉತ್ತಮಜ್ಞಾನಮೊಂದಿರ್ದು ವೈರಾಗ್ಯಮುಂ |
ಮತ್ತಮವ್ಯತಪದವಾಂಛೆಯುಂ ತನ್ನೊಳಿಲ್ಲದಿರ |
ಉತ್ತಮಸುಗತಿಯೊಂದೆ ಸವನಿಸುವುದಾದೊಡೇಂ ? ಪ್ರಾರಬ್ಧಕರ್ಮ ಬಿಡದು ||
ಮತ್ತಿದಂ ಪರಿಹರಿಪ ಸುಜ್ಞಾನಸುವಿರತಿಯ |
ನಿತ್ತು ನಿಜಶರಣಾಭರಣಮಹಾಕೀರ್ತಿಯಂ |
ಬಿತ್ತರಿಸು ಲೋಕದೊಳ್ದೇವೇಶ ! ಶಂಕರನೆ ! ಪೊರೆ ಭುವನಸಂಕುಲವನು ||೭೯||



ಶತವರ್ಷಬಾಳ್ದು ಪರತತ್ವಸಾರವನರಿಯ |
ದತಿಮೌಢ್ಯರೆನಿಸಿಯಮಪುರಪಥದೊಳೊದಯಿಸಿ ಕೊ |
ಳುತೆ ಪಲ್ಗಿರಿದು ದುಃಖಬಡುವವರೆ ಕಿರಿಯರೆನಿಪರ್ನೋಡೆ ಮೂಬರಿಸದ ||
ಸುತನಾದೊಡೇಂ ? ಪಾರಮಾರ್ಥದರಿವಿಂದೆ ನಿಜ |
ವಿತತಭವಮೂಲವಂ ಕೀಳ್ದು ಬಿಸುಡುವವನೇ |
ಕ್ಷಿತಿಯಲ್ಲಿ ಪಿರಿಯನೆಂದೆನಿಸುವನು ಶಂಕರನೆ ! ಪೊರೆ ಭುವನಸಂಕುಲವನು ||೮೦||

ವನಜವಂ ಧಿಕ್ಕರಿಪ ಕಾಂತಿಯುಂ ವದನದೊಳ್ |
ಮನಸಿಜನ ಪಳಿವ ಸೌಂದರ್ಯಮುಂ ಕಾಯದೊಳ್ |
ಜನರಂ ಮರುಳ್ಗೊಳಿಪ ಮಧುರೋಕ್ತಿಯುಂ ಬಾಯೊಳಧಿಕತರಕೌಟಿಲ್ಯಮುಂ ||
ಅನುದಿನಂ ಮಾನಸದೊಳಿರ್ದೊಡೇಂ ? ನಿಜಬೋಧೆ |
ತನಗಿಲ್ಲದಿರ್ದೊಡದು ವಿಪಿನಕೌಮುದಿಯಂತೆ |
ಕೊನೆಗೆ ನಿಷ್ಫಲವಹುದು ಕರುಣವಿಡು ಶಂಕರನೆ ! ಪೊರೆ ಭುವನಸಂಕುಲವನು ||

ಜ್ವರಗುಲ್ಮಕುಷ್ಠಪೀನಸ ಪಾಂಡುರಣಭಗಂ |
ದರ ಕಾಸಕೃಚ್ಛ್ರಾದಿವಿವಿಧರೋಗಂಗಳುಂ |
ಕರುಳಿನೊಳ್ಪುಟ್ಟಿಸುವ ಪರಿಪರಿಯ ಯಾತನೆಗಳಿಂ ನೋಯಲಾರದೆ ನಾಂ ||
ಎರಡುಕರಗಳನೊಡ್ಡಿ ಬೇಡಿಕೊಳ್ವೆಂ ಭವ |
ಚ್ಚರಣಸನ್ನಿಧಿಯಲ್ಲಿ ಪರಿಭವಾಂಭೋಧಿಯಿಂ |
ದಿರದೆ ಕಡೆಹಾಯಿಸೆಂದಾವಗಂ ಶಂಕರನೆ ! ಪೊರೆ ಭುವನಸಂಕುಲವನು ||೮೨||

ಮರ್ಮವಂ ತಿಳಿದು ನಡೆದೊಡೆ ನಿತ್ಯಕರ್ಮದಿಂ |
ಧರ್ಮ ಬೆಳೆವುದದರಿಂ ದುಷ್ಕೃತ ಹರಣವಹುದು |
ನೈರ್ಮಲ್ಯಮದರಿಂ ಹೃದಯದಲ್ಲಿ ನೆಲೆಗೊಳ್ಗುಮದರಿಂದೆ ಸಂಸಾರದ ||
ಮರ್ಮದೋಷಂಗಳೆಲ್ಲಂ ಕಂಡುಬರ್ಪುವೈ |
ಶರ್ಮಕರವಿರತಿ ತೋರ್ಪುದದರಿಂ ಶಮೆದಮೆಯು |
ಕೂರ್ಮೆ ಸಿದ್ಧಿಪುದು ನಿಜಭಕ್ತಗ್ಗೆ ಶಂಕರನೆ ! ಪೊರೆ ಭುವನಸಂಕುಲವನು||೮೩||

Digitized by ROJA MUTHIAH RESEARCH LIBRARY

ಸ್ನಾನಮಾಡುವ ಕಾಲದೊಳ್ಬೇಳ್ಪವರ್ಗ್ಗೆ ತಾಂ |
ದಾನಮಾಡುವ ಕಾಲದೊಳ್ತನ್ನ ಸುತನನಭಿ |
ಮಾನದಿಂ ಮುದ್ದಿಸುವ ಕಾಲದೊಳ್ರೋಗಂಗಳಡಸಿರ್ಪ ಕಾಲದಲ್ಲಿ ||
ದೀನರಕ್ಷಕ ! ಪಾಹಿಮಾಮೆನುತ ಭಕ್ತಿಯಿಂ |
ಧ್ಯಾನಿಪನಘಂ ಪರಿವುದೈ ಜ್ಯೋತಿಸಂಗದಿಂ |
ದಾಣಂ ದಹಿಪ್ಪ ಕಪ್ಪುರದಂತೆ ಶಂಕರನೆ ! ಪೊರೆ ಭುವನಸಂಕುಲವನು ||೮೪||

ಪಂಚವಿಂಶತಿತತ್ವತತಿಯೊಳಿರ್ದುಂ ನೀಂ ಪ್ರ |
ಪಂಚನಿಚಯಕ್ಕೆ ಮಹದಾನಂದದಿಂ ಕೂಡಿ |
ಪಂಚವಿಂಶತಿಲೀಲೆಗಳನಿರದೆ ತೋರುತಂ ಧರಣಿಯೊಳ್ನಿಜಭಕ್ತರ ||
ಸಂಚಿತಾದ್ಯಖಿಲಕರ್ಮಂಗಳಂ ದಹಿಸಿದೈ |
ಪಂಚೀಕರಣವಿಚಾರವನುಸಿರ್ದಭವ ! ಬಹು |
ವಂಚಕರ ಸಂಗವಂ ತಪ್ಪಿಸೈ ಶಂಕರನೆ ! ಪೊರೆ ಭುವನಸಂಕುಲವನು ||೮೫||

ಪೊಡೆಯಲ್ಲಿ ಕಲ್ಮಷಂ ನಿಬಿಡಮಾಗಿರೆ ಪೊರಗೆ |
ಬಿಡದೆ ತೊಳೆದೊಡೆ ಶುದ್ಧನಪ್ಪನೇಂ ? ಪಾಲೆರದು |
ಕಿಡದಂತೆ ಕಡುಮಮತೆಯಿಂ ಬೆಳೆದ ಬೇವಿನಗಿಡುಂ ಬಿಡದು ನಿಜಗುಣವನು ||
ಮಡಿಯಾವುದಭವ ! ನೀನಖಿಲ ಜೀವಿಗಳೊಡೆಲೊ |
ಳಿಡೆವಿಡದೆ ನೆಲೆಸಿರ್ದು ಪಾವನಂಗೈಯುತಿರೆ |
ಮಡಿಯೆನಿಪುದಮಲತರಚಿತ್ತವೈ ಶಂಕರನೆ ! ಪೊರೆ ಭುವನಸಂಕುಲವನು ||೮೬||

ಪೊಡವಿಯೊಳ್ಕತಕೋಟಿದುರಿತಕರ್ಮವನೆಸಗಿ |
ಕಡೆಗಳಿದು ಪೋಪಂದು ಬಟ್ಟೆಯೊಳ್ಬಡಿಘಡಿಸಿ |
ಕಡುಗೋಪದಿಂದಾರ್ಭಟಿಸುತೆ ಸೆಳೆದೊಯ್ದೆನ್ನನಡಿಗಡಿಗೆ ಹಿಂಸೆಗೆಯ್ವ ||
ಕಡುದುರುಳರಪ ಜವನ ಭಟರಂ ತ್ರಿಶೂಲದಿಂ |
ಜಡಿದು ಭಕ್ತೋದ್ಧಾರಬಿರುದನುರೆ ಮೆರೆಯಿಸೈ |
ಮೃಡ ! ನಿನ್ನ ಪದಯುಗವ ಪಿಡಿದಿಹೆನು ಶಂಕರನೆ ! ಪೊರೆ ಭುವನಸಂಕುಲವನು||



ಮೆರೆವಷ್ಟಮದದಂತಿಯೂಥ ಭಯದಿಂದಾನ |
ವಿರತಂ ತಪಿಸುತಿರ್ಪೆನೀದುಷ್ಟಮೃತಿದೈತ್ಯ |
ನುರುಭೀತಿಯೊಂದಡಸಿ ನಡುಗುತಿರ್ಪೆಂ ಮತ್ತಮಜ್ಞಾನತಿಮಿರದಿಂದ ||
ಕುರುಡನಂತಿರ್ಪೆನದರಿಂ ಪ್ರಾಣಪೋಪಂದು |
ನೆರೆ ಭವಭಯವ ನೀಗುವಾಕಾರದಿಂದೆಸೆವ |
ಶರಣಜನ ಪರಿಪಾಲ ಗುಣಶೀಲ ಶಂಕರನೆ ! ಪೊರೆ ಭುವನಸಂಕುಲವನು ||೮೮||

ಪೂರ್ವಪುಣ್ಯದೊಳೊಳ್ಳಿಧನ ದೊರೆದೊಡೇನಿಳೆಗ |
ಪೂರ್ವವೆಂದೆನಿಪ ಸುವಿವೇಕಸಂಪತ್ತಿಯಂ |
ಗರ್ವಬಲಯುಕ್ತಪಂಚೇಂದ್ರಿಯಗಳೆಂಬ ಕಳ್ಳರಪಹರಿಸಿದುದರಿಂದ ||
ಒರ್ವ ಹುಟ್ಟಂಧಕನ ಪಾಂಗಿನಿಂ ತಿಳಿಯದಾಂ |
ಸಾರ್ವದಾ ಮೋಹಾಂಧಬಿಲದೆ ಕೆಡೆದಿಹೆನಕಟ ! |
ಪಾರ್ವತೀಪ್ರಿಯ ! ನನಗೆ ಮೈದೋರು ಶಂಕರನೆ ! ಪೊರೆ ಭುವನಸಂಕುಲವನು ||

ಧಾರಿಣಿಯೊಳೆನಿತು ಶಾಸ್ತ್ರಗಳಿರ್ಪುವನಿತನುಂ |
ಪಾರುಗಾಣಿಸಲೆನ್ನಲುಪಮತಿಗೆ ಸಾಧ್ಯವೇ |
ನಾರಯ್ಯಲಡಸಿದಪುವಡಿಗಡಿಗೆ ತೋರ್ಪಲ್ಪಕಾಲದೊಳ್ವಿಘ್ನಂಗಳು ||
ಈರೀತಿಯಿರ್ಪಂದು ಭವದಂಘ್ರಿಕೃಪೆಯಿಂ ವಿ |
ಚಾರಗೆಯ್ಯುತೆ ಮುಖ್ಯಸಾರಾಂಶವಂ ಗ್ರಹಿಸಿ |
ಸಾರಸುಖವಂ ಪೊಂದುವುದೆ ಜಾಣ್ಮೆ ಶಂಕರನೆ ! ಪೊರೆ ಭುವನಸಂಕುಲವನು ||

ನಿರುತ ಕಾಯಕಗುಣವೆನಿಪ್ಪನ್ಯ ವಿತ್ತಾಪ |
ಹರಣ ಪರಸತಿಸಂಗ ಜೋರತ್ವಜಂತುಪ್ರ |
ಕರಹಿಂಸೆಗಳಘವಂ ನಾಶಗೈದಿನ್ನು ತವಪೂಜೆ ಪರಪೋಷಣೆಮೇಣ್ ||
ಪರಮಸತ್ಕರ್ಮಾಚರಣೆ ಶರಣಸೇವೆಯಿಂ |
ಬುರುತರದ ಸದ್ಗುಣಂಗಳನೆನಗೆ ಸಂತತಂ |
ಕರುಣಿಸೈ ಪುರಮಥನ ಗುಣಸದನ ಶಂಕರನೆ ! ಪೊರೆ ಭುವನಸಂಕುಲವನು||೯೧||

Digitized by ROJA MUTHIAH RESEARCH LIBRARY

ವಾಚಕದ ಗುಣವೆನಿಪ್ಪನೃತೋಕ್ತಿ ಪೈಶೂನ್ಯ |
ನೀಚತ್ವ ಕಾರ್ಕಶ್ಯಕಾರ್ಪಣ್ಯ ಮೇಣ್ದುರಾ |
ಲೋಚನೆಗಳಿಂದೊಗೆವ ದುರಿತವಂ ಕಿಡಿಸುತಂ ವಿನಯಪರಹಿತಸತ್ಯವು ||
ಔಚಿತ್ಯವಚನ ಸಂಪ್ರೀತಿ ಸುವಿಚಾರಂ ಸ |
ದಾಚಾರವೆಂಬ ಸುಗುಣಂಗಳಂ ಸಂತತಂ |
ಸೂಚಿಸೈ ಕರುಣದಿಂ ಸರ್ವೇಶ ಶಂಕರನೆ! ಪೊರೆ ಭುವನಸಂಕುಲವನು ||೯೨||

ಮಾನಸಿಕಗುಣವೆನಿಪನಿಷ್ಟಚಿಂತನೆ ವೈರ |
ಹೀನಕೌಟಿಲ್ಯ ಪರಧನವಧೂಕಾಂಕ್ಷೆ ಮೇ |
ಣ್ಪ್ರಾಣಿಘಾತುಕತನ ದುರಿತಕೃತ್ಯಗಳನೊಡನೆ ಕಳೆಯುತ್ತೆ ತವಪದದೊಳು ||
ನ್ಯೂನವಿರಹಿತಭಕ್ತಿ ಭೂತದಯೆ ವಿರತಿ ಸು |
ಜ್ಞಾನ ಶಮೆದಮೆಯೆಂಬ ಸದ್ಗುಣಂಗಳನೆನಗೆ |
ಸೂನಶರಹರ ಕರುಣಿಸವಿರತಂ ಶಂಕರನೆ! ಪೊರೆ ಭುವನಸಂಕುಲವನು ||೯೩||

ನಳಿನಶರಹರ! ನನ್ನೊಳಿರ್ಪ ಮಹದಜ್ಞಾನ |
ವಳಿದುದೈ ಭವದಂಘ್ರಿಸಾನ್ನಿಧ್ಯಮಿರುತಿರ |
ಲ್ಕಳಿವು ಹುಟ್ಟಿನ ಭೀತಿಯೆನಗುಂಟೆ? ಕೊಲ್ವರಾರ್ಕಾಯ್ವರಾರೆಂದುಸಿರಲಿ? ||
ತಿಳಿದಿರ್ಪೆ ನೀನಿದಿರ ಕಾರಣವಿವರಣವಂ |
ತಳುವು ಮಾಡುವುದೇಕೆ? ಮುಂದವರಬಾಧೆಯಂ |
ಕಳೆವ ಭಾರವನೊಪ್ಪಿಸಿದೆನಿಂದೆ ಶಂಕರನೆ! ಪೊರೆ ಭುವನಸಂಕುಲವನು ||೯೪||

ಕಷ್ಟಿಲ್ಲಕದನುಜರಲ್ಲಹಿತನಾಗಿ ಗೀರ್ವಾಣ |
ರಲ್ಲಿ ಹಿತನಾಗಿ ತಪದಿಂ ಮೆಚ್ಚಿಸುತ್ತೆ ನಿ |
ನ್ನಲ್ಲಿ ವರಗಳನಂದು ಪಡೆದ ಫಲ್ಗುಣನಲ್ಲಿ ನಿಜರೂಪುದೋರಿಸಿದಯ್ ||
ಎಲ್ಲಿ ನೋಡಿದೊಡಲ್ಲಿ ಪರಿಪೂರ್ಣನಾಗಿ ಜಗ |
ಕೆಲ್ಲ ಗುರುವೆನಿಸಿ ಭಜಕರ ಹೃದಯದಲ್ಲಿರ್ಪೆ |
ಬಲ್ಲಿದಂ ನೀನಹುದು ಭೂತೇಶ ಶಂಕರನೆ! ಪೊರೆ ಭುವನಸಂಕುಲವನು ||೯೫||



A 2485

ವರುಷ ನೂರಾಯುಷ್ಯವದರೊಳೈವತ್ತು ಕಳೆ |
ದಿರುಳಲ್ಲಿ ಮಿಕ್ಕರ್ಧದೊಳ್ಬಾಲ್ಯವೃದ್ಧಾಪ್ಯ |
ಬರಿದೆ ಕಳೆದುದು ಮತ್ತಮರ್ಧದೊಳ್ರೋಗದುಃಖಾದಿಯುತಪರಸೇವೆಯು ||
ಇರದೆ ಸಂದುದು ಜಲತರಂಗಚಂಚಲಜೀವ |
ಕರರೆ! ಸೊಗಮೆತ್ತಣಿಂದದು ಬಂದಪುದು ದೇವ! |
ಕರುಣಮಂ ತೋರಿ ನಿಜಭಕ್ತನೊಳ್ಶಂಕರನೆ! ಪೊರೆ ಭುವನಸಂಕುಲವನು ||೯೬||

ನಿನ್ನ ಮಹಿಮೆಯನರಿವರೇಂ? ದುರಾತ್ಮಕರೇಗ |
ಳುನ್ನತಸುಕೃತಕರ್ಮಗಳನಾಶಿಸದೆ ಬರಿದೆ |
ಗನ್ನಗತಕದ ಪಾಪಕೃತ್ಯಗಳನೆಸಗುತಂ ತವ ಚರಣಕಭಿನಮಿಸದೆ ||
ಇನ್ನೊಮ್ಮೆ ಕೀರ್ತಿಸದೆ ಕಾಲಾಹಿವದನದೊಳ್ |
ಮುನ್ನಮೆ ಪುಗುವರಕಟ! ಮರುಳುಹಿಡಿದಂತೆ ತಾಂ |
ಪನ್ನಗಾಭರಣ ನೀಂ ಕರುಣಿಪುದು ಶಂಕರನೆ! ಪೊರೆ ಭುವನಸಂಕುಲವನು||೯೭||

ಶಿವೆಯಲ್ಲಿ ತನಗಿರ್ಪ ರತಿಗಾಗಿ ವನಕೈದಿ |
ನವಕುಸುಮಗಳಕಳ್ದುಕುಯ್ದು ತರ್ಪಂದೊಂದು |
ಕುವಲಯಂ ನೆಲದಲ್ಲಿ ಬೀಳಲದು ಶಿವೆಗೆಂದುಸಿರಲಾಗಳಾಶ್ವೇತನು ||
ದಿವಿಜಪದವಂ ಪಡೆದು ಮುನಿವಂಶದೊಳ್ಸೇರಿ |
ತವೆ ಧನ್ಯನೆನಿಸಿದಂ ನೀನೊಲಿದಬಳಿಕಿನ್ನು |
ತವ ಭಕ್ತಜನಕುಂಟೆ? ಪಾತಕಂ ಶಂಕರನೆ! ಪೊರೆ ಭುವನಸಂಕುಲವನು ||೯೮||

ಪರಮಗಂಗಾದೇವಿ ನರರಪಾಪಂಗಳಂ |
ವರಸುಧಾಕರನವಿರತಂ ಮನದ ತಾಪವಂ |
ಸುರಪಾದಪಂ ಜನ್ಮದಾರಿದ್ರ್ಯವಂ ಪರಿಹರಿಸುವಂತೆ ಧರಿಣಿಯಲ್ಲಿ ||
ಇರದೆ ನೀನೊರ್ವನೀಮೂರುತಾಪಂಗಳಂ |
ಭರದೆ ಪರಿಹರಿಸಿ ರಕ್ಷಿಪನೆಂದು ನಂಬಿಹೆನು |
ಮರೆಯದೆನಗೊಲ್ಲು ಕರುಣಾವನಧಿ ಶಂಕರನೆ! ಪೊರೆ ಭುವನಸಂಕುಲವನು||೯೯||

Digitized by ROJA MUTHIAH RESEARCH LIBRARY
Q.21417 N92

ಆರಿತ್ತವರ್ಗರ್ಭದಲ್ಲಿರ್ಪ ಶಿಶುವಿಗಾ |
ಹಾರವಂ ? ಶಿಖಿನಿವಹಕಂ ಚಿತ್ರವರ್ಣವಂ |
ರಾಶಾಜಿಪಂತಾರು ? ಬರೆದವರ್ನೀರ್ದುಂಬಿದರ್ದಾರಿಕೇಳಕಾರು ? ||.
ಆರಿತ್ತವರ್ಜಂತುಗಳ ಕಣ್ಗೆ ಕಳೆಯನಿರ |
ದಾರು ? ಪೊರೆವರ್ಮೂರುಲೋಕವಂ ನೀನಲ್ಲ |
ದಾರುಂಟು ? ಪರಿಪೂರ್ಣ ಜಗಜಾಲ ಶಂಕರನೆ ! ಪೊರೆ ಭುವನಸಂಕುಲವನು ||

ತನ್ನಿರವನರಿವುದಕೆ ಶಾಸ್ತ್ರಂಗಳಂ ಮತ್ತೆ |
ನಿನ್ನನಾರಾಧಿಸಲ್ದೇಹವಂ ಧ್ಯಾನಿಸ |
ಲ್ಕುನ್ನತಮನೋಬುದ್ಧಿಯಂ ತತ್ವಬೋಧೆಗುತ್ತಮಗುರುವನುರುಕೃಪೆಯಿಂ ||
ಭಿನ್ನವಿಡದಿತ್ತಿರ್ದೊಡಂ ಲೋಗತೀತಕ್ಕೆ |
ಬನ್ನಬಡಿಸುತಿಹ ಸಂಸಾರದೊಳ್ಭ್ರಮಿಸುವರೊ ? |
ಪನ್ನಗಾಭರಣ ಕೃಪೆಮಾಡು ನೀಂ ಶಂಕರನೆ ! ಪೊರೆ ಭುವನಸಂಕುಲವನು ||೧೦೧||

ಒಂದೊಂದುಯುಗದಲ್ಲಿ ತನುವನುರೆ ದಂಡಿಸುತ |
ಮೊಂದೊಂದೆ ಸುವ್ರತನಿಯಮದಿಂದೆ ಮಾನವ |
ರ್ಪಿಂದೆ ಮೆಚ್ಚಿಸಿ ಸುಗತಿಯಂ ಪಡೆದು ಕೃತಕೃತ್ಯರೆನಿಸಿಕೊಂಡರದರಿಂದೆ ||
ಇಂದೀಯುಗದೊಳೆಲ್ಲರುಂ ಭವಚ್ಚರಣಾರ |
ವಿಂದಸಂಸ್ಮರಣೆಯಿಂ ಸದ್ಗತಿಯನೊಂದುವುದು |
ಸಂದ ಸೌಲಭ್ಯಪಥವಲ್ಲವೇಂ ? ಶಂಕರನೆ ! ಪೊರೆ ಭುವನಸಂಕುಲವನು ||೧೦೨||

ತನುವೇನು ಶಾಶ್ವತವಿದಾವಾಗ ಪೋಪುದೋ ? |
ತನಗೆ ತಿಳಿಯದೆ ಬರಿದೆ ಹಾಳುವಾದಂಗೆಯ್ದು |
ಬಿನುಗುತನದಿಂದೆಲ್ಲರಂ ನಿಂದಿಸುವೆನೀವುದಕೆ ನಾಳೆ ತನಗಾದೊಡೆ ||
ವಿನಯದಿಂದಿಂದೆ ಬೇಕೆಂಬೆನ್ನೈ ನಾಳೆ ಭೋಂ |
ಕನೆ ಬರ್ಪ ಯಮಭಟರ ಕೊಲೆಗೀಡುಮಾಡದಿರು |
ಘನಕರುಣವಿಡು ಸುಗುಣಮಣಿಹಾರ ಶಂಕರನೆ ! ಪೊರೆ ಭುವನಸಂಕುಲವನು ||



ಒಡಲೊಳಡಗಿರ್ಪ ಕಾಮಾದಿಷಡರಿಗಳನಡಿ |
ಗಡಿಗೆ ತಡೆತಡೆವ ಘನಶಾಂತಿಯಂ ತಳೆಯದಾ |
ನೆಡೆವಿಡದೆ ಪರರ ಗುಣಗಳನೆಣಿಸುತಭವ ! ನಿನ್ನಂಮರೆದುಮಬ್ಬಿನಿಂದ ||
ಕಡುಕಾಂಕ್ಷೆಯೊಳ್ಕಾಸುವೀಸಗಳ ಕೂಡಿಟ್ಟು |
ಕುಡದದರೊಳಿನಿಸನದು ಕಡೆಗಳಿದು ಪೋಪಂದು |
ಬಿಡದೆ ನೆರೆಚಿಂತಿಸಿದೊಡೇನಹುದು? ಶಂಕರನೆ ! ಪೊರೆ ಭುವನಸಂಕುಲವನು||೧೦೪

ಅನ್ನವಸ್ತ್ರಂಗಳಿಂ ನೆರೆ ಬಾಳ್ವರಂ ಕಂಡು |
ಭಿನ್ನತಂತ್ರಂಗಳಿಂ ಕಿಡಿಸುತಿಹರಾವಗಂ |
ಹೊನ್ನುಪೆಣ್ಮಣ್ಣಿಗಾಶಿಸಿ ಖೂಳಮಾನವರ್ಕಳ್ಪಾತಕತ್ವದಿಂದ ||
ಇನ್ನು ನಡೆಯಿಪ ನೀಚಕೃತ್ಯಂಗಳಂ ಪೇಳ್ವೊ |
ಡೆನ್ನಲ್ಪಬುದ್ಧಿಗಳವಲ್ಲವಿಾ ಯುಗದಲ್ಲಿ |
ಮುನ್ನಕಡೆಹಾಯ್ವುದೆಂತಕಟಕಟ? ಶಂಕರನೆ ! ಪೊರೆ ಭುವನಸಂಕುಲವನು||೧೦೫

ಸತ್ತವರ್ಗಳಲೇಕೆ ? ತನ್ನನನಿಶಂ ಬಿಡಗೆ |
ಪೊತ್ತವರ್ಪೆತ್ತವರ್ಗಾವಿರದೆ ಬುವಿಯಲ್ಲಿ |
ಸತ್ತು ಪೋದಪರಲ್ಲದುಳಿವರೇಂ ? ಮಿತ್ತು ಕಾದಿರ್ಪುದದು ಬೆನ್ನಿನಲ್ಲಿ ||
ಹೊತ್ತುಗಳೆಯಲ್ಬಹುದೆ ? ಬರಿದೆ ಪಾಳ್ಗತೆಯಿಂದೆ |
ಕೆತ್ತಿಗಂ ನೀನಿರ್ದು ಮಣ್ಣುಕೂಡಿಸಬೇಡ |
ಮತ್ತೀಗಳರಿವಿನೊಳ್ಗಣ್ಣಿತ್ತು ಶಂಕರನೆ ! ಪೊರೆ ಭುವನಸಂಕುಲವನು ||೧೦೬||

ವೇದಶಾಸ್ತ್ರಾಗಮಮಹತ್ತತ್ವಯುತಸಾರ |
ವೇದಾಂತಕಾದಿಬೋಧಕಕರ್ತಚಿನ್ಮೂಲ |
ಮೇದಿನೀಧರನಿಲಯಶಂಕರಾನಂದಗಂಕಿತವಾದ ಸುಚರಿತೆಯನು ||
ಆದರಿಸು ಕೇಕಮಾನಸದಿಂದೆ ಕೇಳ್ವರ್ಗೆ |
ಮೋದದಿಂ ಪಠಿಸರ್ಗೆ ಸದ್ಗತಿಯನೊಲಿದೀವ |
ನಾದಿಮೂರುತಿ ಪರಮಕೃಪೆಯಿಂದ ಶಂಕರನೆ ! ಪೊರೆ ಭುವನಸಂಕುಲವನು ||೧೦೭

Digitized by ROJA MUTHIAH RESEARCH LIBRARY

ಮಂಗಳಂ ರವಿಚಂದ್ರವಾಯುಸಖಿನಯನಂಗೆ |
ಮಂಗಳಂ ನಿರತಿಶಯಸುಗುಣಮಣಿಹಾರಂಗೆ |
ಮಂಗಳಂ ಶುಭ್ರತರದೇಹಂಗೆ ಮಂಗಳಂ ಕಲಧೌತಗಿರಿಗೃಹಂಗೆ ||
ಮಂಗಳಂ ಸಕಲಭುವನಾಳಿಪರಿಪಾಲಂಗೆ |
ಮಂಗಳಂ ಸುರಪಮುಖದಿವಿಜ ಸಂಸ್ತುತ್ಯಂಗೆ |
ಮಂಗಳಂ ಸರ್ವಸ್ವತಂತ್ರಂಗೆ ಮಂಗಳಂ ಜಗದಾದಿ ಶಂಕರಂಗೆ ||೧೦೮||

ಶ್ರೀಮಚ್ಛಂಕರಾನಂದಸ್ವಾಮಿ ಕಿಂಕರನೆನಿಸಿರ್ಪ

ನಾಗೈಯನಿಂ ವಿರಚಿತಮಾದ

## ಭಕ್ತಿಸುಧಾಸಾರಗ್ರಂಥಂ

ಸಂಪೂರ್ಣಂ.

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
| --- | --- |

ಪುಸ್ತಕಸೂಚಿ

ವ. ಸಂ: Q.2:417 N22

ಕ್ರ. ಸಂ: 2485.

ಲೇಖಕ: ನಾಗೈಂತಯ್ಯ ( ಸಿ ).

ಪುಸ್ತಕನಾಮ ಭಕ್ತಿ ಸುಧಾಸಾರಂ.

ವ. ಸಂ: Q.2:417 N22

ಕ್ರ. ಸಂ: 2485.

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY